IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed(Group –I) Journal Volume 11, Iss 11, November 2022

# ಆತ್ಮ–ಜೀವ–ತತ್ವೇಂದ್ರಿಯಗಳ ಕುಲ ಯಾವುದೆಂದವನೊಳಗಿನ ಕುಲದ ಹೊಯ್ದಾಟ

**ಡಾ. ಜಯಪ್ರಕಾಶ್ ಶೆಟ್ಟಿ ಹೆಚ್,** ಸಹಪ್ರಾಧ್ಯಾಪಕರು, ಸಪ್ರದಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ
ತೆಂಕನಿಡಿಯೂರು ಉಡುಪಿ ೫೭೬೧೦೬

ಕನಕನನ್ನು ಕೆಣಕಬೇಡ ಕಣಕಿ ತಿಣುಕಬೇಡ ಅನ್ನುವುದೊಂದು ಮಾತಿದೆ. ಪ್ರಾಯಶಃ ಈ ಮಾತು ಕನಕನನ್ನು ವಿವರಿಸಿಕೊಳ್ಳಬಹುದಾದ ವೈವಿಧ್ಯತೆಯ ಸಾಧ್ಯತೆಯನ್ನೇ ಸೂಚಿಸುತ್ತಿರಬಹುದು. ಕನಕನಲ್ಲಿ ಅಂತಹ ವೈವಿಧ್ಯತೆಗೆ ಬೇಕಾದ ಕಾರಣಗಳೂ ಇವೆ. ಯಾಕೆಂದರೆ ಮಧ್ಯಕಾಲೀನಯುಗದ ಈ ಕವಿ, ಕೀರ್ತನಕಾರ ತನ್ನ ಕಾಲದ ಅನೇಕ ತಲ್ಲಣಗಳಿಗೆ ಕೊರಳಾದವನು. ವರ್ತಮಾನದ ನಿರಾಸೆಗೆ ಎದುರಾಗಿ ಪರ್ಯಾಯಗಳ ಹುಡುಕಾಟದಲ್ಲಿ ತೊಡಗಿಕೊಂಡವನು. ಆತನ ಪರ್ಯಾಯಗಳ ಹುಡುಕಾಟದಲ್ಲಿ ನಮ್ಮ ಕಾಲದ ಸಂಕಟಗಳಿಗೂ ಉತ್ತರಗಳನ್ನು ಹುಡುಕಿಕೊಳ್ಳುವ ಪ್ರೇರಣೆಗಳಿವೆ. ಹೀಗಾಗಿ ಆತ ಮತ್ತೆ ಮತ್ತೆ ನಮಗೆ ಪ್ರಸ್ತುತವಾಗುತ್ತಲೇ ಇರುವಂತೆ ಭಾಸವಾಗುತ್ತಾನೆ. ಕನಕನಲ್ಲಿರುವ ಹೊರಚಾಚುಗಳೇ ಆತನನ್ನು ಮತ್ತೆ ಮತ್ತೆ ಎದುರುಗೊಂಡು ನಮ್ಮ ಕಾಲದ ತಲ್ಲಣಗಳಿಗೆ ಮದ್ದು ಹುಡುಕಿಕೊಳ್ಳುವ ಪ್ರೇರಣೆಗಳಾಗುತ್ತಿವೆ. ಆದರೆ ಕನಕನ ಈ ವೈವಿಧ್ಯತೆಗಳೇ ಕೆಲವೊಮ್ಮೆ ತಮ್ಮ ತಮ್ಮೊಳಗೆ ಎದುರು ಬದುರಾಗಿಯೂ ನಿಲ್ಲುವುದುಂಟು. ಈ ದ್ವಂದ್ವ ಕನಕನಲ್ಲಿರುವ ಹೊರಚಾಚುಗಳನ್ನು ಸಪಾಟುಗೊಳಿಸಿ ವಿವರಣೆಗೊಳಪಡಿಸುವ ರೂಢಿವಾದಕ್ಕೂ ನೆರವಾದುದಿದೆ. ಆತನೊಳಗೊಂದು ಪಾಂಥಿಕ ಏಕಶಿಲೆ ನೆಟ್ಟು, ವೈಷ್ಣವತೆಯ ತ್ರಿಪುಂಡ್ರದೊಳಗೆ ಅಡಕಗೊಳಿಸಿಡಲು ದುಡಿದುದಿದೆ. ಇನ್ನೊಂದು ಕಡೆಯಿಂದ ಆತನ ದಾಸತ್ವವನ್ನು ಲೋಕದ ಅರಸುತನಕ್ಕೆ ಎರಗದ ಆಧ್ಯಾತ್ಮಿಕ ಭಿತ್ತಿಯಾಗಿ, ಕುಲದ ಕುರಿತ ನಿಲುವುಗಳನ್ನು ಪುರೋಗಾಮಿ ಪರಾಕಾಷ್ಠೆಯಾಗಿ ವಿವರಿಸಿಕೊಳ್ಳುವ ಅತಿರೇಕಗಳಿಗೂ ಇದು ಕಾರಣವಾದುದಿದೆ. ಈ ರೂಢಿವಾದ ಮತ್ತು ಅತಿರೇಕಗಳಿಂದಾಗಿ, ಕನಕನನ್ನು ವಿವರಿಸಿಕೊಳ್ಳಬಹುದಾದ ವೈವಿಧ್ಯತೆಯ ಸಾಧ್ಯತೆಯನ್ನು ಮೀರಿ, ಅಲ್ಲೊಂದು ಏಕರೂಪತೆ ನೆಲೆಗೊಂಡಿರುವುದಿದೆ. ಹೀಗಾಗಿ ಭಕ್ತಕನಕ, ದಾಸಕನಕ, ತಳಮೂಲದ ನಿರಂಕುಶ ಕನಕ ಎಂಬ ಉಪನಾಮಗಳ ಬೇಲಿಯೊಳಗಿಟ್ಟೇ ಕನಕನನ್ನು ಪರಿಚಯಿಸಿಕೊಡುವ ಪರಿಪಾಠ ಬೆಳೆದುಬಂದುದನ್ನೂ ಅವಶ್ಯವಾಗಿ ಗಮನಿಸಬೇಕಾಗುತ್ತದೆ.

ಸಾಮಾಜಿಕ ಸಂದರ್ಭವನ್ನು ಎದುರುಗೊಳ್ಳುವಾಗಲೆಲ್ಲಾ ಕನಕ ನಮಗೆ ವಿಶೇಷವಾಗಿ ನೆನಪಾಗುವುದು ಈ ನೆಲದ ಸಾಮಾಜಿಕ ರೋಗವಾದ ಜಾತಿಸಮಸ್ಯೆಗೆ ಸಂಬಂಧಿಸಿದಂತೆ. ಅಧಿಕಾರಕೇಂದ್ರದಿಂದ ಹೊರಗಿಡುವ ರಾಜಕಾರಣದ ಭಾಗವೇ ಆಗಿರುವ ಕುಲ ಅಥವಾ ಜಾತಿಪ್ರಶ್ನೆಯ ಅಸಮಾನತೆಗೆ ಸಂಬಂಧಿಸಿದಂತೆ. ನಿಶ್ಚಿತವಾಗಿಯೂ ಈ ಶ್ರೇಷ್ಠತೆಯ ಮಾಪಕದ ಜೊತೆಗೆ ಕನಕನ ಗುದ್ದಾಟವಿದೆ. ಕೃಷ್ಣದೇಗುಲದ ಹುಂಡಿ ತುಂಬುವ ಸಾಧನವಾಗಿಯೇ ಬಳಕೆಗೊಂಡ ಸುಪ್ರಸಿದ್ಧವಾದ ಉಡುಪಿಯ ಕನಕಕಿಂಡಿಯ ಐತಿಹ್ಯವಂತೂ ಕನಕ ಎದುರಿಸಿದ ಜಾತಿಸತ್ಯದ ಜೊತೆಗಿನ ಸಂಘರ್ಷವನ್ನೇ ರೂಪಕದಲ್ಲಿ ಹೇಳುತ್ತಿದೆ. ಕನಕನಿಗೆ ವ್ಯಾಸರಾಯರು ಮೊದಲ ತೀರ್ಥಕೊಡುತ್ತಿದ್ದರೆಂಬ ಅಂಬೋಣಗಳು, ಕುರುಬನಿಗೆ ಬೋಧಿಸಿದ ಕೋಣಮಂತ್ರದ ಪ್ರಸಂಗಗಳೆಲ್ಲವೂ ಕನಕನ ಸಾಮಾಜಿಕ ಅವನತಾವಸ್ಥೆಯನ್ನೆ ಮತ್ತೆ ಮತ್ತೆ ದೃಢೀಕರಿಸುತ್ತವೆ. ಕನಕ ಯಾರು ಎನ್ನುವಲ್ಲಿ ಬಸವಣ್ಣನಿಗಿರುವ ಹಾಗೆ ಸರ್ವಜ್ಞನಿಗಿರುವ ಹಾಗೆ ದ್ವಿಜಮೂಲದ ಯಾವ ಕಥನಗಳೂ ಇಲ್ಲ. ಆತನನ್ನು ಕುರುಬ ಇಲ್ಲವೇ ಬೇಡ ಎಂಬ ತಳಸ್ತರದ ಜೊತೆಗಿಟ್ಟೇ ಇವತ್ತಿಗೂ ವಿವರಿಸಿಕೊಂಡು ಬರಲಾಗುತ್ತಿದೆ. ಈ ಲೋಕ ಬದುಕಿನಲ್ಲಿ ಆತನ ಜನನಮೂಲವನ್ನು ಹೈಜಾಕ್ ಮಾಡಲಾಗದುದುರಿಂದಲೋ ಅಥವಾ ಆ ಪ್ರಯತ್ನದ ಅಗತ್ಯ ಕಾಣದುದುರಿಂದಲೋ ಕನಕ ತಳಮೂಲದವನಾಗಿಯೇ ಉಳಿದುಬಿಟ್ಟಿದ್ದಾನೆ. ಹೆಚ್ಚೆಂದರೆ ಆತನಿಗೆ ತಂಬುರ ನಾರದರ ಅವತಾರ ಕಥನಗಳ ಮೂಲಕ ಪಾವಿತ್ರ್ಯವನ್ನು ಜೋಡಿಸಲಾಗಿದೆ. ಈ ಎಲ್ಲ ಹಿನ್ನೆಲೆಗಳು ಕನಕನ ಜಾತಿನೆಲೆಯ ಕೆಳಸ್ತರವನ್ನೂ, ಆತ ಸಾಮಾಜಿಕವಾಗಿ ಎದುರಿಸಿರಬಹುದಾದ ಸಂಕಟಗಳನ್ನೂ ಸೂಚಿಸಿ, ಆತನ ಮಾತುಗಳ ತಳಸ್ತರದ ಸಂಕಟಗಳ ಶೋಧನೆಗೆ ಒತ್ತಾಯಿಸುತ್ತವೆ.

## ಮೀರುವಿಕೆಯ ಮಾದರಿಗಳು

ಭಾರತೀಯ ಸಂದರ್ಭದಲ್ಲಿ ಜಾತಿಯೆಂಬ ರಚನೆ ಕೊಡವಿಕೊಳ್ಳಬೇಕಾದ ಭಾರವೇ. ಆದರೆ ಹಾಗೆ ಅದು ಎಲ್ಲರಿಗೂ ಭಾರವಾಗಿಲ್ಲ. ಕೆಲವರ ಪಾಲಿಗೆ ಸಂಭ್ರಮವೂ ಹೌದು. ಆಯ್ಕೆಯಿಲ್ಲದ ಹುಟ್ಟಿನಿಂದ ದಕ್ಕುವ ಜಾತಿಯನ್ನು ಸಂಭ್ರಮಿಸಲಾರದ ವಿವೇಕ ಉಳಿಸಕೊಂಡವರ ಪಾಲಿಗೆ ಇದೊಂದು ಹೊರೆ. ಇದೇ ಕಾರಣಕ್ಕಾಗಿ ಬದುಕಿನ ಎಲ್ಲ ಅವಕಾಶಗಳನ್ನು ಕಳೆದುಕೊಳ್ಳುವಂತಾಗಿ ಹೊರಗುಳಿಸಲ್ಪಟ್ಟ ಪರಿಧಿಯ ಬದುಕುಗಳಿಗಂತೂ ಇದು ನೀಗಿಕೊಳ್ಳಲೇಬೇಕಾದ ಭಾರ. ಎರಡೂ

Research Paper © 2012 IJFANS. All Rights Reserved 

ಕಡೆಯಿಂದ ನಡೆಯುವ ಈ ನೀಗಿಕೊಳ್ಳುವ ಆಲೋಚನಾ ಕ್ರಮಗಳ ಆಶಯದಲ್ಲಿ ಸಾಮ್ಯತೆ ಇದೆ. ಆದರೆ ಅವು ಆಕೃತಿಯಲ್ಲಿ ವ್ಯತ್ಯಾಸವಾಗುತ್ತವೆ. ಸಹಜವಾಗಿ ಮೇಲ್ಸ್ತರದ ಹುಟ್ಟುಗಳಿಂದ ಜಾತಿಮುಕ್ತನಾಗಬಯಸುವಲ್ಲಿ ತಳಮೂಲದ ಕಡೆಗಿನ, ಬಯಲಿನ ಕಡೆಗಿನ ನಿರ್ಜಾತೀಕರಣದ ಚಲನೆ ಕಾಣುತ್ತದೆ. ಪ್ರಾಯಶಃ ಬಸವಣ್ಣನಲ್ಲಿಯ ದ್ವಿಜವಿಮೋಚನೆಯ ಹಪಾಹಪಿ ಈ ಬಗೆಯದು. ಅಲ್ಲಿ 'ತಾನು ಹಾಗಲ್ಲ' ಎಂದು ಸಾರ್ವಜನಿಕವಾಗಿ ಘೋಷಿಸಿಕೊಳ್ಳುವುದು ಮುಖ್ಯವಾಗುತ್ತದೆ. ಕುಲದ ನಿರಾಕರಣಕ್ಕೆ ಸಮೂಹದ ಸಮ್ಮತಿಯನ್ನು ಬೇಡುವ, ಕುಲವನ್ನು ದೃಢೀಕರಿಸುವುದಕ್ಕಿಂತ ನಿರಚನೆಗೆ ಒಳಪಡಿಸುವ ಪ್ರಕ್ರಿಯೆಗಳು ಮುಖ್ಯವಾಗುತ್ತವೆ. ನಿರಾಕೃತವಾದುದರ ಜೊತೆಗಿನ ವಿಲೀನವು ಮುಖ್ಯವಾಗುತ್ತದೆ. ಜಾತಿ ಅಹಮಿಕೆಯ ಪೊರೆ ಕಳಚಿಕೊಳ್ಳುವುದು ಮುಖ್ಯವಾಗುತ್ತದೆ. ಇನ್ನು ತಳಮೂಲದ ಕಡೆಯಿಂದ ಬರುವ ಜಾತಿ ಮೀರುವಿಕೆಗಳಲ್ಲಿ ಸಾಮಾಜಿಕ ಯಥಾಸ್ಥಿತಿಯಲ್ಲಿ ನಿರೂಪಿತವಾದ 'ಎತ್ತರ' ಅಂದರೆ ಮೇಲ್ಮುಖದ ಕಡೆಗೆ ಚಲಿಸುವ ಆಕಾಂಕ್ಷೆ ಒಂದು ಬಗೆ. ಈ ಅಂತರ ನಿರ್ಮಾಣಕ್ಕೆ ಕಾರಣವಾದ ತಾತ್ವಿಕತೆಯಿಂದಲೇ ಬಿಡುಗಡೆ ಹೊಂದುವುದು ಇನ್ನೊಂದು ಬಗೆ. ಎಲ್ಲಿ ವಿಲೀನವಾಗುವ ಆಶಯದೊಂದಿಗೆ ಮೇಲ್ಮುಖವಾದ ಚಲನೆ ಇರುತ್ತದೆಯೋ ಅಲ್ಲಿ ಕೇಂದ್ರದ ಸಮ್ಮತಿಗಾಗಿ ಆಗ್ರಹಿಸುವ ಪ್ರಶ್ನೆ, ಕೇಳಿಕೆ, ಅಹವಾಲಿನ ದನಿಗಳಿರುತ್ತವೆ. ಅಲ್ಲಿ ಕುಲವೆಂಬುದು ಶ್ರೇಷ್ಠತೆಯ ಸಂಕೇತವಾಗಿಯೇ ಪರಿಭಾವಿತವಾಗುತ್ತದೆ. ಆ ಕುಲದ ಎತ್ತರಕ್ಕೆ ಏರುವುದೇ ಅಲ್ಲಿ ಗುರಿಯಾಗಿರುತ್ತದೆ.

ಆದರೆ ತಾತ್ವಿಕವಾಗಿ ಬಿಡುಗಡೆ ಪಡೆಯಬಯಸುವ ಆಲೋಚನೆಗಳು ಜೀವ-ಆತ್ಮಗಳ ಕುಲ ಯಾವುದು ಎಂದು ಕೇಳಿಕೊಳ್ಳದೆ ಕೇಂದ್ರಗಳನ್ನೇ ಆಸ್ಫೋಟಿಸಿಕೊಳ್ಳುವ ಮೂಲಕ ಎಲ್ಲವನ್ನೂ ಉಲ್ಲಂಘಿಸುತ್ತವೆ. ಹೀಗಾಗಿ ಅವುಗಳ ಎದುರಿಗೆ ಪ್ರಮಾಣಗಳು ನಿರುಪಯುಕ್ತವಾಗುತ್ತವೆ. ಅತ್ಯಂತ ಪವಿತ್ರ ಸಂಕೇತ ಅಥವಾ ಪ್ರಮಾಣಗಳನ್ನೂ ಕೆರಹೊಲಿದ ಸಾವಿರವರ್ಷದ ಕೆಸರಿನಲ್ಲಿ ಅದ್ದಿ ಕುರೂಪಗೊಳಿಸಬಲ್ಲ(ಮಂಟೇದಲ್ಲಮನಲ್ಲಿ) ಶಕ್ತಿ ಅವುಗಳಿಗಿದೆ. ಅಲ್ಲಿ ಯಾರೂ ಮುಖ್ಯರಲ್ಲ, ಯಾವುದೂ ಮುಖ್ಯವಲ್ಲ ಎಂಬ ಸಮಭಾವವಿದೆ. ನಡೆಕಾರ ದೊಡ್ಡವೆಂಕಟಗಿರೆಪ್ಪನಿಗೆ ಸಂಬಂಧಿಸಿದ ಪ್ರಸಂಗವೊಂದನ್ನು ಇದಕ್ಕೆ ಉದಾಹರಣೆಯಾಗಿ ಉಲ್ಲೇಖಿಸಬಹುದು. "ವೆಂಕಟಗಿರಿಯೋಗಿ ಸಂಜೆಹೊತ್ತು ಮಾತ್ರ ಭಿಕ್ಷೆಗಾಗಿ ತನ್ನೊಡನಿದ್ದ ನಾಯಿಯೊಡನೆ ಬರುವುದೊಂದು ಬಿಟ್ಟರೆ, ಮಿಕ್ಕೆಲ್ಲಾ ಸಮಯ ಬೆನ್ನಘಟ್ಟಕ್ಕೆ ಸೇರಿದ ತೋಪೊಂದರ ಪಾಳುಬಿದ್ದ ಮುತ್ತುರಾಯನ ಗುಡಿಯೊಂದರಲ್ಲಿ ಏಕಾಂತದಲ್ಲಿರುತ್ತಿದ್ದರು. ........ಆತ ಭಿಕ್ಷೆಗೆ ಬರುವುದನ್ನು ಅನೇಕರು ಕಾಯುತ್ತಿದ್ದರು. ಏಕೆಂದರೆ ಆತ ಭಿಕ್ಷೆಗೆ ಬರುವುದು ಭಾಗ್ಯವೇ ಬಂದಂತಾಗುತ್ತಿತ್ತು. ........(ಆತ)ಮನೆ ಮುಂದೆ ನಿಂತು ಅನ್ನ ನಿರೀಕ್ಷಿಸುತ್ತಿದ್ದರೇ ವಿನಃ ಬೇಡುತ್ತಿರಲಿಲ್ಲ. ಗುಣವಂತರು ಬಡವರಾಗಿರಲಿ, ಭಾಗ್ಯವಂತರಾಗಿರಲಿ, ಹೊಲೆಯರಾಗಿರಲಿ, ಮಾದಿಗರಾಗಿರಲಿ, ಯಾವ ಭೇದವನ್ನೂ ಎಣಿಸದೆ ಗಂಜಿಯಾದರೂ ಸ್ವೀಕರಿಸುತ್ತಿದ್ದರು. .........ಹೀಗೆ ಒಂದು ದಿನ ನೀರಗಂಟಿ ಗಂಗಮ್ಮನ ಮನೆ ಮುಂದೆ ನಿಂತಿದ್ದರು. ಯೋಗಿಯನ್ನು ನೋಡಿದ ಗಂಗವ್ವನಿಗೆ ಕೈಕಾಲು ನಡುಗಲಾರಂಭಿಸಿದುವು. ಮಾತು ಹೊರಡಲಿಲ್ಲ. ಏಕೆಂದರೆ, ಆಕೆ ಆದಿನ ಸತ್ತದನದ ಕೊರಬಾಡಿನ ಸಾರು ಮಾಡಿದ್ದಳು........ (ಪಾಪದ ಭೀತಿಯಿಂದ) 'ಸ್ವಾಮಿ...ಈವೊತ್ತು ಏನೂ ಮಾಡಿಲ್ಲ. ನಾಳೆ ಬನ್ನಿ....'ಎಂದಳು. ಯೋಗಿ ನಗುತ್ತಲೇ 'ಉಟ್ಟಿ ಮ್ಯಾಗಿರೋ ಬಾಡುಸಾರು ತಗೊಂಡ್ ಬಾರೇ ಗಂಗೀ...!'ಎಂದರು. ಮರುಮಾತನಾಡದೆ ಗಂಗಮ್ಮ ತಂದು ಯೋಗಿಯ ಕೈಯಲ್ಲಿದ್ದ ಸಟ್ಟದೊಳಗೆ ಹಾಕಿ ಬಾಗಿಲಿಗೆ ಒರಗಿಕೊಂಡು ನೋಡುತ್ತಿದ್ದಂತೆ.....ಒಂದು ತುತ್ತು ತನ್ನ ಬಾಯಿಗೆ...ಇನ್ನೊಂದು ತುತ್ತು ನಾಯಿ ಬಾಯಿಗೆ, ಹೀಗೇ ಮಾಡುತ್ತಿದ್ದರು. ಗಂಗವ್ವ 'ನೀವ್ ವೊಟ್ಟೆ ತುಂಬಾ ತಿನ್ನೀ! ಆಮೇಲೆ ನಾಯಿಗೆ ಬ್ಯಾರೆ ನಾ ಆಕ್ತೀನಿ' ಅಂದ್ಲು. (ಅದಕ್ಕೆ) "ನೀನ್ ಬ್ಯಾರೇ ನಾನ್ ಬ್ಯಾರೇ....ನಾಯಿ ಬ್ಯಾರೇ ಅಂದ್ಕಂಡ್ ಕೆಟ್ಟೀಯೆ! ನಾವೆಲ್ಲಾ ಒಂದೇ ಮರ್ದಾಗಿನ ಬ್ಯಾರ್‌ಬ್ಯಾರೆ ಕೊಂಬೆಗುಳ್ ಕಣೇ ಗಂಗೀ...ದೇವ್ರೂ ಅಲ್ಲ ದೆಯ್ಯಾನೂ ಅಲ್ಲಾ..... ಪಾಪಾನೂ ಇಲ್ಲ ಪುಣ್ಯಾನೂ ಇಲ್ಲ" ಅಂತ ಹೊರಟು ಹೋದರು" (ಪದ್ಮಾಲಯ ನಾಗರಾಜ್,೨೦೧೨,ನಡೆಕಾರ ದೊಡ್ಡವೆಂಕಟಗಿರೆಪ್ಪ, ಆದಿಮ ಪ್ರಕಾಶನ ಕೋಲಾರ,ಪು.೩೦) ಈ ದೃಷ್ಟಿಗೆ ಜೀವಜಾತಿಗಳ ಪ್ರತ್ಯೇಕ ಗುರುತಿಸುವಿಕೆಯನ್ನೂ ಇಲ್ಲವಾಗಿಸಿಕೊಂಡು ಸಹಜವಾಗಿ ನೋಡಬಲ್ಲ ತಾತ್ವಿಕ ಎತ್ತರವಿದೆ. ಅಲ್ಲಿ ದೇಹ, ಆತ್ಮ, ಜೀವವೆನ್ನುವ ವಿಭಾಗವಾಗಲೀ, ದೇವ-ಮಾನವ-ತೀರ್ಯಗ್-ನಾರಕಿನ್ನುವ ಭೇದವಾಗಲಿ ಸಾಧ್ಯವಾಗವು.

## ಕುಲದ ಕೋಟೆಯೊಳಗಿನ ತಳಮಳ:

ಕುಲವನ್ನೇ ಅಮಾನ್ಯಮಾಡುವ ಇಂತಹ ಸಿದ್ಧ, ಶಮಣರಿಗೆ ಜಾತಿ ಒಂದು ಸಮಸ್ಯೆಯಲ್ಲ. ಆದರೆ ಕುಲೀನರ ಕೋಟೆಯೊಳಗೆ ಕುಲದ ಕೆಣಕುವಿಕೆಯ ನೋವುಂಡವರಿಗೆ, ಅಂಚಿನವರಾಗಿ ಕೇಂದ್ರದ ಒಡನಾಟಕ್ಕೆ ಬಿದ್ದ ಸಂತರಿಗೆ, ಕುಲ ಎಂದರೇನೆಂದು ಪ್ರಶ್ನಿಸಬೇಕಾದ ಜರೂರತ್ತೂ ಎದುರಾಗುತ್ತದೆ. "ಆತ್ಮ ಯಾವ ಕುಲ ಜೀವ ಯಾವ ಕುಲ?", "ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?"ಎನ್ನುವ ಕನಕನ ಪ್ರಶ್ನೆಗಳ ಹಿಂದೆ ಇಂತಹ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed(Group -I) Journal Volume 11, Iss 11, November 2022

ಸಾಂಸ್ಕೃತಿಕ ಒತ್ತಡವಿದೆ. ಶ್ರೇಷ್ಠತೆಯ ವ್ಯಸನಿಗಳೊಂದಿಗೆ ಬದುಕಿ ಅವರನ್ನೇ ಎದುರಿಸಲು ಬಳಸಿದ ತರ್ಕವಿದೆ. ಇದರ ಭಾಗವಾಗಿಯೇ ಆತ ಶ್ರೇಣೀಕರಣದ ಮೇಲ್ತುದಿಯ ವೈದಿಕರನ್ನು ಕುರಿತು "ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪ ಮಾಡಿ ನಿಗಮಾಗಮ ಪುರಾಣಗಳನೋದಿ ತಿಳಿದು ಬಾಗಿ ಪರಸ್ತ್ರೀಯರನು ಬಯಸಿ ಕಣ್ಣಿಡುವಂಥ ಯೋಗಭ್ರಷ್ಟರೆಲ್ಲ ದೇವ ಬ್ರಾಹ್ಮಣರೇ?"(ಸುಧಾಕರ(ಸಂ),ಕನಕ ಸಾಹಿತ್ಯ ದರ್ಶನ ಸಂ-೪,ಪು.೨೦೧) ಎಂದು ನೇರವಾಗಿಯೇ ಪ್ರಶ್ನಿಸುತ್ತಾನೆ. (ಅಚ್ಚರಿ ಎನ್ನುವಂತೆ ಕನಕದಾಸರ ಈ ಸಾಲುಗಳು, ಆಲನಹಳ್ಳಿ ಕೃಷ್ಣ ಅವರ 'ಬೆಳಗು' ಕವನದಲ್ಲಿನ "ಹೊಳೆಯ ನಡುನೀರೊಳಗೆ ಬುಳುಬುಳನೆ ಮುಳುಗುತ್ತ ಒಣಮಂತ್ರ ವಟಗುಡುವ ಅರವತ್ತರ ಗಡಿ ಮುಟ್ಟಿದ ಕಚ್ಚೆಹರುಕ ಶಾನುಭೋಗ; ಕೆರೆಗೆ ಬಂದೂರ ಗರತಿಯರು ಮೊಣಕಾಲಮಟ ನೀರೊಳಗೆ ಸೀರೆ ಮೇಲೆತ್ತಿ ನೀರ ಮೊಗೆವಾಗವರ ಗುದುಗುಡುವ ತುಂಬು ತೊಡೆಗಳ ಕಂಡು ಹಾದರದ ನಗೆ ನಕ್ಕಾಗ ನನ್ನೂರಿನಲ್ಲಿ ಬೆಳಗಾಯಿತು" ಎಂಬ ಸಾಲುಗಳನ್ನೇ ನೆನಪಿಸುತ್ತವೆ!) ಅದರ ಮುಂದುವರಿಕೆಯಾಗಿಯೇ ಮಂತ್ರ ಹೇಳುವ 'ಅವಿವೇಕಿ' ಹಾಗೂ ಅದನ್ನು ಕೇಳುವ 'ಅಜ್ಞಾನಿ'ಗಳಿಬ್ಬರೂ ಕನಕರಲ್ಲಿ ಲೇವಡಿಗೊಳಗಾಗುತ್ತಾರೆ. ಹೊರಗಿದ್ದು ಮಾಡುವ ಪ್ರತಿರೋಧಕ್ಕಿಂತ ಭಿನ್ನವಾಗಿ ಕೇಂದ್ರದ ಜೊತೆಗಿದ್ದೇ ಕನಕ ನಡೆಸಿದ ಸೆಣಸಾಟವಿದು. ದಾಸಕೂಟದೊಳಗಿಂದಲೇ ಬಂದ ವಿಶೇಷ ಮಾದರಿಯ ದನಿಯಿದು.

ಹೀಗೆ ವೈದಿಕರೇ ಕಟ್ಟಿದ ಕೂಟದೊಳಗಿದ್ದ ತಳಮೂಲದ ಹಿನ್ನೆಲೆಯ ಸಂತರುಗಳು ಹಾಗೂ ಸಾಮಾಜಿಕ ಏಣಿಶ್ರೇಣಿಯ ರೂಢಿಯ ಸಾಮಾಜಿಕ ಮಾದರಿಯನ್ನು ಮೀರಿ ನಿಂತ ಸಂತರುಗಳಿಬ್ಬರೂ ತಮ್ಮ ವಿರೋಧದಲ್ಲಿ ಪುರೋಹಿತಶಾಹಿ ಹಾಗೂ ಜಾತಿಯೆನ್ನುವ ಪರಿಭಾಷೆಯನ್ನು ನಿಖರವಾಗಿಯೇ ಗುರುತಿಸಿಕೊಂಡಿದ್ದರು. ತಮ್ಮ ವಿರೋಧಿಗಳ್ಯಾರು ಮತ್ತು ಯಾಕಾಗಿ ಏನನ್ನು ವಿರೋಧಿಸಬೇಕೆಂಬ ವೈಚಾರಿಕ ಖಚಿತತೆ ಅವರಲ್ಲಿತ್ತು. ಒಡನಾಡಬೇಕಾದ ಸಮುದಾಯ ಮತ್ತು ಒಪ್ಪಿಕೊಳ್ಳಬೇಕಾದ ಕಸುಬುಗಳ ಕುರಿತೂ ಅಲ್ಲಿ ಖಚಿತ ವಿಚಾರಾಕೃತಿಗಳಿದ್ದವು. ಆದರೆ ಹೀಗೆ ಹೇಳುವ ಹೊತ್ತಿಗೇ, "ಜರೀಬ್ರಾಹ್ಮಣ ಝಲಾ ಭೃಷ್ಟ । ತರೀ ತೋ ತನ್ಹಿಲೋಕೀ ಶ್ರೇಷ್ಠ । ಜರೀಬ್ರಾಹ್ಮಣ ಮೂಢಮತೀ ತರೀ ತೋ ಜಗದ್ವಂದ್ಯ॥ ಗುರೂ ತೋ ಸಕಳಾಸೀ ಬ್ರಾಹ್ಮಣ। (ಬ್ರಾಹ್ಮಣನು ಭ್ರಷ್ಟನಾದರೂ ಮೂರು ಲೋಕಗಳಲ್ಲಿಯೂ ಉತ್ತಮನು, ಅವನು ಮೂಢನಾದರೂ ಜಗತ್ತಿನಲ್ಲಿ ವಂದನೀಯನು; ಬ್ರಾಹ್ಮಣನೇ ಎಲ್ಲರಿಗೂ ಗುರು)"(ರಹಮತ್ ತರೀಕೆರೆ, ಧರ್ಮಪರೀಕ್ಷೆ, ಪು.೨೪೬) ಎಂದು ಸಾರಿದ ಸಮರ್ಥ ರಾಮದಾಸರಂತಹ ಸಂಪ್ರದಾಯವಾದಿ ದತ್ತೋಪಾಸಕರು ಸಂತತ್ವದ ಮುಸುಕಲ್ಲಿಯೇ ಜಾತಿವಾದವನ್ನು ಪೋಷಿಸಿದ್ದರು. ಅಲುಗುತ್ತಿರುವ ವರ್ಣಾಶ್ರಮ ಧರ್ಮದ ನೆಲೆಗಟ್ಟನ್ನು ಮರಳಿ ಗಟ್ಟಿಗೊಳಿಸುವ ಸಲುವಾಗಿಯೇ ದಾಸಪಂಥ, ಸಂತಪಂಥದ ರೂಪದಲ್ಲಿಯೇ ತಾರತಮ್ಯದ ವ್ಯಾವಹಾರಿಕ ತತ್ವಜ್ಞಾನವನ್ನು ಅನುಸರಿಸಿದ ಯಥಾಸ್ಥಿತಿವಾದಿ ಜಾಗೃತ ಮಾದರಿಗಳೂ ಇದ್ದುವು. ಈ ಮಾದರಿಗಳಲ್ಲಿ ನೆಲೆಕಂಡುಕೊಂಡ ತಳಮೂಲದ ಸಂತರು, ದಾಸರುಗಳ ಮೀರುವಿಕೆಗೆ ಇಕ್ಕಟ್ಟುಗಳಿದ್ದುವು ಎಂಬುದನ್ನು ನಾವು ಮರೆಯಬಾರದು. ಹಾಗಾಗಿ ಕಾಲುದಾರಿಯ ಮುಸುಕಿನಲ್ಲಿರುವ ಮೇಲುದಾರಿಯ ಗುರುತುಗಳನ್ನು ಗುರುತಿಸಿಕೊಳ್ಳದೆ, ಜಾತಿವ್ಯವಸ್ಥೆಯನ್ನು ಕುರಿತ ಸಂತಪಂಥಗಳ ನಿಲುವೆಲ್ಲವೂ ವೈಚಾರಿಕ ನೆಲೆಗಟ್ಟಿನದೆಂದು ಒಂದೇ ಉಸಿರಲ್ಲಿ ಷರಾ ಬರೆಯಲಾಗದು. ಯಾಕೆಂದರೆ ಸಮಾನತೆಯ ತತ್ವಗಳನ್ನು ಎದುರಾಳಿಯಂತೆ ಕಂಡ ಸನಾತನವಾದವು ಆ ಕುರಿತ ಸಾರ್ವಜನಿಕ ಸಮ್ಮತಿಯ ಉತ್ಪಾದನೆಗೆ ಶ್ರಮಿಸಿದ್ದಲ್ಲದೆ, ಪ್ರತಿವಾದಿಯ ಮಾರುವೇಷದಲ್ಲಿಯೇ ತನ್ನ ಯಾಜಮಾನ್ಯವನ್ನು ಜೀವಂತವಾಗಿಡುತ್ತಾ ಬಂದ ಚರಿತ್ರೆಯ ಸತ್ಯವೂ ನಮ್ಮೆದುರಿಗಿದೆ. ಈ ಸತ್ಯದ ಬೆಳಕಿನಲ್ಲಿಯೇ ತಳಮೂಲಕ್ಕೆ ಸೇರಿದ ಕನಕನಂತಹ ದಾಸಕೂಟದ ಸದಸ್ಯನ ಕುಲಸಂಬಂಧೀ ನಿಲುವುಗಳನ್ನು ನಾವು ಪರಿಶೀಲಿಸಬೇಕಿದೆ. ಕನಕ ಮೀರುವಿಕೆಯನ್ನು ಯಾವ ತಾತ್ವಿಕ ಆಕೃತಿಯಲ್ಲಿ ವಿವರಿಸಿಕೊಳ್ಳುತ್ತಿದ್ದಾನೆ ಮತ್ತು ಹಾಗೆ ವಿವರಿಸಿಕೊಳ್ಳುವ ಆಕೃತಿಗಳು ನಿಜಕ್ಕೂ ಸಾಮಾಜಿಕ ಮುಂಚಲನೆಯ ಮಾದರಿಗಳೇ? ಎಲ್ಲಿ ಸಾಮಾಜಿಕ ಮುಂಚಲನೆಯ ಮಾದರಿಗಳೆನಿಸುತ್ತವೆ? ಎಲ್ಲಿ ಹಾಗಾಗದೇ ಉಳಿಯುತ್ತವೆ? ಅವುಗಳ ಸ್ವರೂಪ ಮತ್ತು ಸಮಸ್ಯೆಗಳೇನು ಎನ್ನುವುದನ್ನು ವಿವರಿಸಿಕೊಳ್ಳಬೇಕಿದೆ.

### ಕರ್ಮಸಿದ್ಧಾಂತದ ಜೊತೆಗೆ ಕನಕನ ಇಬ್ಬಗೆಯ ನಂಟು

ನಮ್ಮ ಐಹಿಕ ಬದುಕನ್ನು ವಿಶೇಷವಾಗಿ ಪ್ರಭಾವಿಸುತ್ತಿರುವ ಧಾರ್ಮಿಕ ಸಂಗತಿಗಳಲ್ಲಿ ಕರ್ಮಸಿದ್ಧಾಂತದ ಅಸ್ತಿತ್ವ ಬಹಳ ಗಟ್ಟಿಯಾದುದು. ಕಲ್ಪನೆಯ ನೆಲೆಯಲ್ಲಿ ಜಾತಿಯ ಮಿತಿಯನ್ನು ಮೀರಬೇಕೆನ್ನುವ ಆಶಯವನ್ನೂ, ಮೂರ್ತಸ್ವರೂಪದಲ್ಲಿ ಜಾತಿಯ ನಿಯಮಗಳನ್ನು ಮೀರಬಾರದೆನ್ನುವ ವಾಸ್ತವ ಸಂಗತಿಗಳನ್ನು, ಸಮನಾಂತರವಾಗಿ ಕಾಯ್ದುಕೊಳ್ಳುವ ಮೂಲಕ ಯಥಾಸ್ಥಿತಿವಾದವನ್ನು ಕಾಪಾಡಿಕೊಂಡುಬಂದ ಕರ್ಮಸಿದ್ಧಾಂತದಲ್ಲಿ ಕರ್ಮಕ್ಕೂ ಸಂಸಾರಕ್ಕೂ ಕಾರಣ ಪರಿಣಾಮಗಳ ಸಂಬಂಧವಿದೆ. ಇಹದ ಬದುಕಿನ ಎಲ್ಲವನ್ನೂ ಪರಕ್ಕೂ, ಪೂರ್ವದ ಬದುಕನ್ನು ಇಹಕ್ಕೂ ಗಂಟು ಹಾಕಿಕೊಂಡು ನೋಡುವ ಈ ಆಲೋಚನಾಕ್ರಮ ಶ್ರೇಣೀಕೃತ ವ್ಯವಸ್ಥೆಯಲ್ಲಿ ಜಾತಿಯ ಹಿತಾಸಕ್ತಿಯನ್ನು ಅಚ್ಚುಕಟ್ಟಾಗಿ ಕಾಯ್ದುಕೊಳ್ಳುವ ಹುನ್ನಾರವೇ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed(Group -I) Journal Volume 11, Iss 11, November 2022

ಆಗಿದೆ. ಈ ಸಿದ್ಧಾಂತದ ಜೊತೆಗೆ ಕನಕ ಹೇಗೆ ವ್ಯವಹರಿಸಿದ್ದಾನೆ ಎಂಬುದು ಕುಲ ಮತ್ತು ಜಾತಿಯಂತಹ ಸಾಮಾಜಿಕ ಮಾಲಿನ್ಯದ ಬಗೆಗೆ ಕನಕನ ನಿಲುವಿನ ಕುರಿತಾದ ಚರ್ಚೆಯೇ ಆಗುತ್ತದೆ. ಆದರೆ ಈ ಕರ್ಮಸಿದ್ಧಾಂತ ಮತ್ತು ಅದನ್ನು ಪೋಷಿಸುವ ಶಾಸ್ತ್ರಸಂಗತಿಗಳ ಜೊತೆಗೆ ಕನಕನದು ಒಮ್ಮುಖವಾದ ಸಂಬಂಧವಲ್ಲ. ಆ ಸಂಬಂಧಕ್ಕೆ ಉಭಯಮುಖವಿದೆ. ಶಾಸ್ತ್ರಮೌಢ್ಯಗಳನ್ನು 'ಮತಿಗೆಟ್ಟ ಮಾನವರ ಮಾತಾಗಿ' ಪರಿಗಣಿಸಿಯೂ, ಅನೇಕ ಕಡೆ ಅದಕ್ಕೆ ಸಹಮತದ ಮಾತುಗಳನ್ನು ಆತ ಆಡಿರುವುದಿದೆ. ಉದಾಹರಣೆಗೆ 'ಹರಿಭಕ್ತಿಸಾರ'ದ ಕೊನೆಗೆ ಕೇಳ್ದವಗೆ "ನೂರುಕನ್ಯಾದಾನವನು, ಭಾಗೀರಥೀಸ್ನಾನವನು ಮಿಗೆ ಕೈಯಾರೆ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದು ಊರುಗಳ ನೂರಗ್ರಹಾರವ ಧಾರೆಯೆರೆದಿತ್ತಂತೆ ಫಲ ಕೈಸೇರುವುದು"(ಹರಿಭಕ್ತಿಸಾರ–೧೦೬)ಎಂದಿರುವ ಫಲಸಿದ್ಧಿಯನ್ನು ಗಮನಿಸಬಹುದು. ಇದು ಗುಡಿಯಿಂದ ಹೊರಗಿಟ್ಟವರಿಗೆ ಸೆಡ್ಡುಹೊಡೆದು ಹೊಸಗುಡಿಯನ್ನು ನಿರ್ಮಿಸಿಯೂ, ಪೂಜೆಗೆಂದು ಅವರನ್ನೇ ಕರೆದು ಕೈಮುಗಿದು ಹೊರನಿಂತ ಪರಿಯೇ. ಯಾಕೆಂದರೆ ಜಾತರೆಲ್ಲರೂ ಸಮಾನ ಸಂಜಾತರೆನ್ನುವ ಕನಕ ಇಲ್ಲಿ ತಾನು ಒಪ್ಪಿಕೊಂಡ ದಾಸಕೂಟಕ್ಕೆ ಬೆನ್ನೆಲುಬಾದ ಪುರಾಣಾದಿಗಳು ನಿರೂಪಿಸುವ ಫಲಸಿದ್ಧಿಯನ್ನೇ ಪುನರುಚ್ಚರಿಸುವ ಮೂಲಕ ಅದನ್ನೇ ಪ್ರಮಾಣವಾಗಿ ಒಪ್ಪಿದಂತಾಗಿದೆ.

ಭಕ್ತ ಕನಕನಿಗೆ ಭವ ಒಂದು ಹೊರೆ. ಭವದ ಬಿಡುಗಡೆಯ ತಹತಹ ಸಾಧಕ ಮನಸ್ಸಿನ ಸಹಜ ತಳಮಳ. ಕನಕನ ಈ ಭವಕ್ಕೆ ಶೂದ್ರತೆಯ ಭಾರವೂ ಅಂಟಿದೆ. ಆತನಿಗೆ ಭವದ ಬಿಡುಗಡೆಯಷ್ಟೇ ಅಲ್ಲ, ಈ ಸಾಮಾಜಿಕ ಅವಸ್ಥೆಯಿಂದಲೂ ಬಿಡುಗಡೆಗೊಳ್ಳಬೇಕಿದೆ. ಆದರೆ ಈ ಭವಶೂದ್ರತೆಯ ಬಿಡುಗಡೆಯನ್ನು ಆತ ವಿವರಿಸಿಕೊಳ್ಳುವುದು ಕರ್ಮಸಿದ್ಧಾಂತದ ಹಾದಿಯಲಿ! "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು" ಎನ್ನುವ ಕೀರ್ತನೆಯಲ್ಲಿನ ಕುಲಮುಕ್ತಿಯ ಬಗೆಗಿನ ಮಾತುಗಳಲ್ಲಿ ಈ ಧ್ವನಿಯಿದೆ. ಅದು ಮುಕ್ತನಾದೆ ಎನ್ನದೆ, ಬಿಡುಗಡೆಗೆ ಅರ್ಹವಾದೆ, 'ಮುಕುತಿ ಮಾರ್ಗಕೆ ಯೋಗ್ಯನಾದೆ', ಪೂರ್ವಾರ್ಹತೆ ಪಡೆದೆ ಎಂದೇ ಹೇಳುತ್ತದೆ. ಆ ಅರ್ಹತೆಯಾದರೋ ವೈಷ್ಣವ ತತ್ವವನ್ನು ಒಪ್ಪಿಕೊಳ್ಳುವ ಮೂಲಕ ದಕ್ಕಿದುದು! ಹೀಗೆ ತಾನು ಮತ್ತು ತನ್ನ ನೂರೊಂದು ಕುಲಗಳು ಮುಂದಿನ ಜನ್ಮಕ್ಕೆ ಮುಕ್ತಿಯೋಗ್ಯವಾದ ಹಂತವನ್ನು ತಲುಪಿದೆವು ಎನ್ನುವ ತೃಪ್ತಿ ವ್ಯಕ್ತಪಡಿಸುವಲ್ಲಿ ಕರ್ಮಸಿದ್ಧಾಂತವು ಹೇಳುವ ಹುಟ್ಟಿನ ಏರಿಕೆಯ ಗ್ರಹೀತವೇ ಇದೆ. ಇನ್ನು ವೈಷ್ಣವನಾಗದೆ ಬಿಡುಗಡೆಯಿಲ್ಲ ಎನ್ನುವಲ್ಲಿ ಸಮೂಹವನ್ನು ವೈಷ್ಣವಪಂಥ ಹಾಗೂ ದ್ವೈತತಾತ್ವಿಕತೆಯ ತೆಕ್ಕೆಗೆ ತಂದುಕೊಳ್ಳುವ ಜೊತೆಗೆ ಕುಲಮೂಲದ ಬೀರಯ್ಯ, ಕಾಳಯ್ಯಗಳಿಂದಲೂ ಬಿಡುಗಡೆಗೊಳಿಸುವ ಆಶಯವಿದೆ.

**"ಮುಕುತರಾದರು ಎನ್ನ ನೂರೊಂದು ಕುಲದವರು**
**ಮುಕುತಿ ಮಾರ್ಗಕೆ ಯೋಗ್ಯ ನಾನಾದೆನೊ**
**........................................................**
**ಇಂದೆನ್ನ ಜೀವಕ್ಕು ಸಕಲ ಸಂಪದವಾಯ್ತು**
**ಮುಂದೆನ್ನ ಜನ್ಮ ಸಫಲವಾಯ್ತು"** (ಕ.ಸಾ.ದ,ಸಂ–೪,ಪು.೮೬)

ಹೀಗೆ ಇಲ್ಲಿನ ಈ ಮುಕ್ತಿ ಸಾಮಾಜಿಕ ವಾಸ್ತವದಿಂದ ಪಡೆಯುವ ಬಿಡುಗಡೆಯಲ್ಲ. ವರ್ತಮಾನದ ಬಿಡುಗಡೆಯೂ ಅಲ್ಲ. ನೂರೊಂದು ಕುಲದವರು ಪಡೆದ ಬಿಡುಗಡೆಯೂ ವರ್ತಮಾನಕ್ಕೆ ಸಂಬಂಧಿಸಿದ್ದಲ್ಲ. ಅದು ಜನ್ಮಚಕ್ರದ ಸರಣಿಯಲ್ಲಿನ ಭವಿಷ್ಯದ ನಂಬುಗೆ. ಕರ್ಮಸಿದ್ಧಾಂತವು ಹೇಳುವ ಹುಟ್ಟಿನ ಆರೋಹಣ ಅಥವಾ ಏರಿಕೆಯ ಹಾದಿ. ಈ ಹಾದಿಗೆ ಒಪ್ಪದ, ವೈಷ್ಣವತೆಯ ಕಕ್ಷೆಗೊಳಪಡದ ಅಸಂಖ್ಯರು ಮುಕ್ತರಲ್ಲದ ನಿತ್ಯನಾರಕಿಗಳೇ. 'ನಾವು ಕುರುಬರು ನಮ್ಮ ದೇವರು ಬೀರಯ್ಯ' ಎನ್ನುವ ಕೀರ್ತನೆಯೂ ಆತ್ಯಂತಿಕವಾಗಿ ಇದೇ ಅರ್ಥಕ್ಕಾಗಿ ದುಡಿಯುತ್ತದೆ. ಬೀರಯ್ಯ, ಮಂದೆ ಎಲ್ಲವೂ ತಂತ್ರಗಳಾಗುತ್ತವೆ.

'ನಾವು ಕುರುಬರು.....'ಎನ್ನುವ ಕೀರ್ತನೆ ಜಾತಿ ಮತ್ತು ವೃತ್ತಿ ಸ್ವರೂಪದ ಜೊತೆಗೆ ಕುಲದ ಆಚರಣೆಗೆ ಧಾತುವಾದ ದೈವವನ್ನು ಉಲ್ಲೇಖಿಸಿಕೊಂಡು ಆರಂಭಗೊಳ್ಳುತ್ತದೆ. ಈ ದೇವರ ಗುರುತಿಸಿಕೊಳ್ಳುವಿಕೆಗೆ ಸಾಂಸ್ಕೃತಿಕವಾಗಿ ಮಹತ್ವವಿದೆ. ಯಾಕೆಂದರೆ ಬೀರಯ್ಯನನ್ನು ದೇವರೆಂದು ಘೋಷಿಸಿಕೊಂಡ ಈ ಆರಂಭ ಮಾಧ್ವದರ್ಶನದ 'ಹರಿಸರ್ವೋತ್ತಮ ವಾಯು ಜೀವೋತ್ತಮ' ದರ್ಶನವನ್ನೇ ಒಡೆದುಹಾಕುತ್ತಿದೆ. ಆದರೆ ಕೀರ್ತನೆ ಇದೇ ಭಾವದ ವಿಸ್ತರಣೆಯಲ್ಲ. ಇಲ್ಲಿರುವ ಕುರಿಕಾಯುವ ಪ್ರಸ್ತಾಪವು ಆ ಕಾಯಕವನ್ನು ನೈತಿಕ ಕೆಚ್ಚಿನಿಂದ ಉನ್ನತೀಕರಿಸುವ ಮಾದರಿಯದೂ ಅಲ್ಲ. ಕುರಿಕಾಯುವ ಕಾಯಕದ ವಿವರಗಳೆಲ್ಲವೂ ಆತ್ಮವಾದಿ ನೆಲೆಯ ಆಧ್ಯಾತ್ಮಿಕ ವಿಚಾರವನ್ನು ಪ್ರತಿಪಾದಿಸುವ ತಂತ್ರದ ನೆಲೆಯಲ್ಲಷ್ಟೇ ಬಳಕೆಗೊಳ್ಳುತ್ತಿವೆ. ನಾವು ಕುರುಬರು ನಮ್ಮ ದೇವರು ಬೀರಯ್ಯ ಎಂದ ಕೀರ್ತನೆಯೇ ಕೊನೆಯಲ್ಲಿ 'ಕೇಶವನ ಮನವೊಲಿಸಿ ಭಜಿಸದ ಮನುಜ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved** UGC CARE Listed(Group -I) Journal Volume 11, Iss 11, November 2022

ಹುಚ್ಚು ಕುರುಬ' ಎಂದು ಘೋಷಿಸಿ ನಿಲುಗಡೆಗೊಳ್ಳುತ್ತದೆ. ಹೀಗೆ ಯಾವುದನ್ನು ಒಡೆದು ಹಾಕಿತ್ತೋ ಅದನ್ನೇ ಮತ್ತೆ ಪ್ರತಿಷ್ಠಾಪಿಸುವ ಮೂಲಕ ಆರಂಭದ ಸೊಲ್ಲಿಗೆ ವಿರುದ್ಧವಾದ ಹರಿಸರ್ವೋತ್ತಮ ತತ್ವವನ್ನೇ ಪ್ರತಿಪಾದಿಸಿ ಕೊನೆಗೊಳ್ಳುತ್ತದೆ. ಕೆಳಸ್ತರದ ನಿರೂಪಣೆಗಾಗಿ ಬಂದ 'ಕುರುಬ'ನಿಗಿಂತಲೂ ಕೆಳಸ್ತರದ 'ಹುಚ್ಚುಗುರುಬ'ನನ್ನು ಕಲ್ಪಿಸುವ ಕೀರ್ತನೆ ಅಧೋಸ್ಥಿತಿಯನ್ನು ಮತ್ತಷ್ಟು ತಳಕ್ಕೊಯ್ದು ಬೆದರಿಸುತ್ತದೆ. ಅಷ್ಟೇ ಅಲ್ಲದೆ, ಕೇಶವನನ್ನು ಭಜಿಸಿ ಅಲ್ಲಿಂದ ಮೇಲೇರಬೇಕೆಂಬ ಸೂಚನೆ ನೀಡುವ ಮೂಲಕ ವೈಷ್ಣವತೆಯ ಪ್ರಸಾರತಂತ್ರವನ್ನೂ ಅಳವಡಿಸಿಕೊಳ್ಳುತ್ತದೆ. ಹಾಗಾಗಿ ಕಾಯಕದ ಸ್ವರೂಪವನ್ನೇ ಜೀವದ್ರವ್ಯವಾಗಿಸಿ ಅದರ ಘನತೆಯನ್ನು ಎತ್ತಿತೋರಿಸುವ ಬದಲಿಗೆ "ಕನಕದಾಸನ 'ನರಕುರಿ ಆಗಮ ವೇದಶಾಸ್ತ್ರ ಶ್ವಾನ ಅರಿಮರಿ' ಇತ್ಯಾದಿ ಪದಗಳಲ್ಲಿ ಹೋಲಿಕೆಯ ಅಪವಿತ್ರ ಮೈತ್ರಿ ಇದೆ. ಇದು ಕಾಯಕಮೂಲದ ಜಿಡ್ಡುಗುರುಬರ, ಬೂದಿಗುರುಬರ ಕಾಯಕನಿಷ್ಠೆಯನ್ನು ಶ್ರಮಮೌಲ್ಯವನ್ನು ಅವಜ್ಞೆಗೈದಂತೆ ಬೆಳೆದ ಆಧ್ಯಾತ್ಮಿಕತೆಯ ಅಪವಿತ್ರ ಮೈತ್ರಿ" (ಎಸ್.ಜಿ.ಸಿದ್ಧರಾಮಯ್ಯ, 'ರಾಮಧಾನ್ಯಚರಿತೆಯ ರೂಪಕವಿವೇಕ', ಕನ್ನಡಅಧ್ಯಯನ,ಸಂಪುಟ-೭.ಸಂಚಿಕೆ-೨, ಡಿಸೆಂಬರ್೨೦೦೧, ರಹಮತ್‌ತರೀಕೆರೆ(ಸಂ), ಪು.೨೬) ಎಂಬ ಮಾತನ್ನೂ ಅಗತ್ಯವಾಗಿ ಗಮನಿಸಬೇಕಾಗುತ್ತದೆ.

ಶೂದ್ರತೆಯಿಂದ ಪಡೆಯುವ ಬಿಡುಗಡೆಯಾಗಿ ಕರ್ಮಸಿದ್ಧಾಂತದ ದಾರಿಯನ್ನು ಆಶ್ರಯಿಸುವ ಕನಕನಲ್ಲಿ ಅದಕ್ಕಿಂತ ಭಿನ್ನಪಥದ ಅನುಸರಣೆಯೂ ಇದೆ. ಭಕ್ತನಾಗಿ ಕನಕನಿಗೆ ಇಹವೆಂಬುದು ಬಿಡಿಸಿಕೊಳ್ಳಲೇಬೇಕಾದ ಸಂಕಟ. ಈ ಬಿಡುಗಡೆ ಅಥವಾ ಮುಕ್ತಿಯ ತೀವ್ರಾಸಕ್ತಿಯನ್ನು ವ್ಯಕ್ತಪಡಿಸುವ ಆತನ ಕೀರ್ತನೆಗಳಲ್ಲಿ ದಾಸತ್ವದ ಪರಾಕಾಷ್ಠೆಯಿದೆ. ದಾಸ್ಯದ ತೀವ್ರತೆ ಸೂಚಿಸಲು ಸಾಮಾಜಿಕಸಂದರ್ಭದ ಕುಲವಾಚಕಗಳು ಅಲ್ಲಿ ರೂಪಕದಂತೆಯೂ ಬಳಕೆಯಾಗಿವೆ. ಹಾಗೆ ಕುಲವಾಚಕಗಳನ್ನು ಬಳಸುವ ಕ್ರಮದಲ್ಲಿ ಕನಕ ಕರ್ಮಸಿದ್ಧಾಂತಕ್ಕಿಂತ ಭಿನ್ನವಾಗುತ್ತಾನೆ. ಯಾಕೆಂದರೆ ಕರ್ಮಸಿದ್ಧಾಂತವು ಪುಣ್ಯಸಂಚಯನದ ಮೂಲಕದ ಏರುಗತಿಯ ಕುಲವಿಕಾಸದ ಅಮೂರ್ತ ಕಲ್ಪನೆಯನ್ನು ಮುಂದಿಡುತ್ತದೆ. ಆದರೆ ಭವಚಕ್ರದಿಂದ ಬಿಡುಗಡೆ ಬಯಸುವ ಭಕ್ತಿಮಾರ್ಗದ ಕನಕ ಕೀರ್ತನೆಗಳು ಮುಕ್ತಿಯ ದಾರಿಯಾಗಿ ತಳಮೂಲಕ್ಕೆ ತಳಮೂಲವಾಗುವುದನ್ನು ಆಯ್ದುಕೊಳ್ಳುತ್ತವೆ. ಇದು ಕರ್ಮಸಿದ್ಧಾಂತದ ಆರೋಹಣಕ್ರಮದ ವಿಕಾಸಗತಿಯ ಬಿಡುಗಡೆಗಿಂತ ಭಿನ್ನವಾದ ಅವರೋಹಣ ಕ್ರಮ. ಮುಕ್ತಿಯನ್ನು ಪಾಲಿಸುವಂತೆ ಕೇಶವನಲ್ಲಿ ಬೇಡುವ "ದಾಸದಾಸರ ಮನೆಯ ದಾಸಿಯರ ಮಗ ನಾನು" ಎನ್ನುವ ಕೀರ್ತನೆ ಭಕ್ತನ ಮುಕ್ತಿಯ ಅರ್ಹತೆಯನ್ನು ನಿವೇದಿಸಿಕೊಳ್ಳುವ ಬಗೆಯಲ್ಲಿ ಈ ಗುಣ ಸ್ಪಷ್ಟವಾಗಿ ಗೋಚರವಾಗುತ್ತದೆ

**ಹಲವು ದಾಸರ ಮನೆಯ ಹೊಲೆಯ ದಾಸನು ನಾನು**
**ಕುಲವಿಲ್ಲದ ದಾಸ ಕುರುಬ ದಾಸ**
**ಛಲದಿ ನಿನ್ನಯ ಭಜಿಪರ ಮನೆಯ ಮಾದಿಗ ದಾಸ**
**ಸೆಲೆ ಮುಕ್ತಿ ಪಾಲಿಸೆನ್ನೊಡೆಯ ಕೇಶವನೆ'(ಕ.ಸಾ. ದ.ಸಂ-೪, ಪು.೯೩)**

'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದ ಬಸವಣ್ಣನ ಧೋರಣೆಯ ಕೀರ್ತನೆಯಿದು. ಇಲ್ಲಿ ಕನಕ ಬಳಸಿರುವ ಕುಲನಾಮಗಳು ಅವನತಾವಸ್ಥೆಯನ್ನು ತಳಕ್ಕೊಯ್ಯುವ ಮೂಲಕ ರೂಪಕದ ನೆಲೆಯಲ್ಲಿ ಭಕ್ತನ ಅಧೀನತೆಯ ಗರಿಷ್ಠಗೆರೆಯನ್ನು ಸೂಚಿಸುತ್ತಿವೆ. ಜೊತೆಗೆ ಸಾಮಾಜಿಕ ಸಂದರ್ಭದಲ್ಲಿ ಈ ಸಮುದಾಯಗಳ ಅವನತಾವಸ್ಥೆಯನ್ನೂ ಸಂಕೇತಿಸುತ್ತಿವೆ. ಹೊಲೆಯ, ಕುರುಬ, ಮಾದಿಗ ಇವ್ಯಾವುವೂ ಸಾಮಾಜಿಕ ಗೌರವವನ್ನು ಹೊಂದಿದ ಕುಲಗಳಲ್ಲ ಎಂಬ ಸೂಚನೆ ಕೀರ್ತನೆಯಲ್ಲಿಯೇ ಇದೆ. ದಾಸತ್ವವನ್ನು ಈ ಮಟ್ಟಕ್ಕಿಳಿಸುವ ಕನಕ ಜಾತಿಕನಿಷ್ಠತೆಯ ಮೂಲಕವೇ ಬಿಡುಗಡೆಯ ಅರ್ಹತೆ ತನಗಿದೆ ಎಂದು ದಾವೆಹೂಡುತ್ತಾನೆ. ಹೊಲೆತನ, ಕುರುಬತನ, ಮಾದಿಗತನಗಳೆಂಬ ಕೀಳುಗಳ ಬಿಡುಗಡೆ ಕೀರ್ತನೆಯ ಆಶಯವಲ್ಲ. ಆದರೆ ಕನಕನಲ್ಲಿ ಅವುಗಳು ಮುಕ್ತಿಯೋಗ್ಯತೆಯ ಪ್ರಮಾಣಗಳಾಗಿ ಬಳಕೆಗೊಳ್ಳುವ ಮೂಲಕ ವಿಕಾಸದ ಹೊಸಸಾಧ್ಯತೆಯು ತೆರೆದುಕೊಳ್ಳುತ್ತಿದೆ. ಅದು ಕುಲೀನತೆಯ ಬದಲಿಗೆ ಅಕುಲೀನನಾಗುವ 'ಕುಲವಿಲ್ಲದ ದಾಸ ಕುರುಬದಾಸ'ನಾದ ತಳಮೂಲಿಗನಾಗುವ ಅವನತಮುಖೀ ದಾರಿ. ಇಲ್ಲಿ ಮುಕ್ತಿ ಮುಂದಿನ ಜನ್ಮದ ಕನಸಲ್ಲ. ಈಗಲೇ ಆಗ್ರಹಿಸಿ ಪಡೆಯಬಯಸುವ ಬೇಡಿಕೆ. ಅದು ಶಾಸ್ತ್ರಾರ್ಥದ ದಾರಿಯಲ್ಲಿ ಸಂಗ್ರಹಿಸಿದ ಪುಣ್ಯಸಂಚಯನದ ದಾರಿಯೂ ಅಲ್ಲ.

ಪಾವಿತ್ರ್ಯವನ್ನೇ ಎದುರಿಗಿಟ್ಟು ಅಪವಿತ್ರರನ್ನು ಬದಿಗಿರಿಸಿಕೊಂಡು ಬಂದ ಮಡಿವಾದಿಗಳ ಜೊತೆಗೆ ಕನಕನಿಗೆ ನಿರಂತರ ಸಂಘರ್ಷವಿತ್ತು. ತನ್ನ ತಳಮೂಲದ ಸಾಮಾಜಿಕ ಹಿನ್ನೆಲೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಆತ ವಿಲೀನವಾಗಲು ಬಯಸಿದ ದಾಸಕೂಟದ ನಡುವಿನ ತರತಮದಿಂದಾಗಿ ಈ ತಿಕ್ಕಾಟ ಅನಿವಾರ್ಯವೂ ಆಗಿತ್ತು. ಈ ಕಾರಣಕ್ಕಾಗಿಯೇ ಕನಕನ ತಿಕ್ಕಾಟಕ್ಕೆ

ಸಾಂಸ್ಕೃತಿಕ ಮಹತ್ವವಿದೆ. ಅಧಿಕಾರ ಕೇಂದ್ರದಿಂದ ಸ್ವೀಕೃತವಾದುದಕ್ಕೆ ತಕರಾರುಗಳಿರುವುದಿಲ್ಲ. ಬದಲಾವಣೆ ಅದರ ಅಪೇಕ್ಷೆ, ಅಗತ್ಯ ಎರಡೂ ಅಲ್ಲ. ಬದಲಾವಣೆ ಬೇಕಾಗುವುದು ಅಂಚಿಗೊತ್ತಲ್ಪಟ್ಟುದಕ್ಕೆ. ಹಾಗಾಗಿ ಸಹಜವಾಗಿಯೇ ನಿರಾಕರಿಸಲ್ಪಟ್ಟ ಪರಿಧಿಗೆ ತಕರಾರುಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ನಿರಾಕರಣಕ್ಕೆ ಬುನಾದಿಯಾದ ಶುದ್ಧತೆಯು ಕನಕನ ಪ್ರಶ್ನೆಗೆ ಗುರಿಯಾಗುತ್ತದೆ. ಹರಿಭಕ್ತಿಸಾರದ, "ಎಂಜಲೆಂಜಲು ಎಂಬರಾ ನುಡಿ ಎಂಜಲಲ್ಲವೆ? ವಾರಿ ಜಲಚರದೆಂಜಲಲ್ಲವೆ? ಹಾಲು ಕರುವಿನ ಎಂಜಲಲ್ಲವೆ?ಎಂಜಲೆಲ್ಲಿಯದೆಲ್ಲಿಯುಂ ಪರರೆಂಜಲಲ್ಲದೆ ಬೇರೆ ಭಾವಿಸಲುಂಟೆ?" (ಹರಿಭಕ್ತಿಸಾರ,೧೦೧)ಎನ್ನುವ ಪ್ರಶ್ನಾವಳಿಯ ಸರಣಿಯಲ್ಲಿ ಸಾಮಾಜಿಕ ಅಂತರವನ್ನು ನಿರ್ಮಿಸಿಟ್ಟ ಮಡಿಯ ಅರ್ಥಹೀನತೆಯ ಅನಾವರಣವಿದೆ. ಹೀಗೆ ಲೋಕದಲ್ಲಿ ಎಂಜಲಿಲ್ಲದೆ ಏನಾದರೂ ಇರಲುಂಟೆ? ಎಂಬ ಪ್ರಶ್ನೆಯೇ, 'ಎಲ್ಲ ದೇಹಗಳಲ್ಲಿಯೂ ಭಗವಂತನಿರಬೇಕಾದರೆ ಹೊಲೆಯುಂಟೆ?' ಎಂಬ ಮೂಲಭೂತ ಪ್ರಶ್ನೆಯಾಗಿ ರೂಪಾಂತರಗೊಳ್ಳುತ್ತದೆ. ಹೀಗಾಗಿ ಎಲ್ಲವನ್ನೂ ಮಡಿಮೈಲಿಗೆಯ ತಕ್ಕಡಿಯಲ್ಲಿಟ್ಟು, 'ಕಡೆಕಡೆಗೆ ತಾ ಹೊಲೆ ಹೊಲೆಯೆನುತ ತೊಲಗುವ' ಮಡಿವಾದಿಗಳು ಇಲ್ಲಿ 'ಹುಟ್ಟಿನ ನೆಲೆಕಾಣದ ಅಜ್ಞಾನಿ'ಗಳೆನಿಸುತ್ತಾರೆ. ಕುಲದ 'ಅಹಂಕಾರದಲಿ ತತ್ವದ ಕುರುಹ ಕಾಣದೆ ವೇದ ಶಾಸ್ತ್ರ ಪುರಾಣ'ಗಳನ್ನು ಓದುವ ಈ ನಿರರ್ಥಕರು 'ಪಠಣ ಪಂಡಿತ'ರೆನಿಸುತ್ತಾರೆ. ಈ ಮೂಲಕ ಕನಕ ಶ್ರೇಷ್ಠತೆಯ ವ್ಯಸನಿಗಳನ್ನು ಅಣಕವಾಡುತ್ತಾನೆ.

### ಜಾತಿಚರ್ಚೆಯನ್ನು ಜಠರಕ್ಕೂ ವಿಸ್ತರಿಸಿದ ಕನಕ

ಎಲ್ಲವನ್ನೂ ಗುರುತಿಗೊಳಪಡಿಸುವ ಸಾಂಸ್ಥಿಕವ್ಯವಸ್ಥೆ ಮನುಷ್ಯರ ಜೊತೆಗೆ ಎಲ್ಲವನ್ನು ಕುರುಹುಗಳಾಗಿ ವಿಭಜಿಸುತ್ತದೆ. ಇಂತಹ ಕಡೆ ಸಮುದಾಯದೊಂದಿಗಿರುವ ಅನ್ನ ಅಥವಾ ಅನ್ನದೊಂದಿಗಿರುವ ಸಮುದಾಯಗಳು ಒಟ್ಟೊಟ್ಟಿಗೆ ತರತಮ ಸಂಸ್ಕಾರ ಘಟಕಗಳಾಗಿ ವಿಂಗಡಿತವಾಗುತ್ತವೆ. ಹಸಿವೆಂಬ ಬೆಂಕಿಗೆ ಉರುವಲಾಗಬೇಕಾದ ಅನ್ನವು ಅಸಮಾನತೆಯ ಬೆಂಕಿಗೆ ಇಂದನವಾಗುವಂತೆ ಬಳಕೆಯಾಗುತ್ತದೆ. ಅನ್ನದ ಮೂಲ ಅಸ್ತಿತ್ವವು ಹಿನ್ನೆಲೆಗೆ ಸರಿದು ಅದು ಸಂಸ್ಕಾರಕಾರಣವೆಂಬ ವಿಭಜನೆಯಲ್ಲಿ ಶ್ರೇಣೀಕರಣಗೊಳ್ಳುತ್ತದೆ. ಅಲ್ಲಿ ತಿನ್ನುವವರಲ್ಲಿ ಇರುತ್ತವೆ ಎಂದು ಪರಿಕಲ್ಪಿತವಾದ ಸಂಸ್ಕಾರಗಳನ್ನು ಅನ್ನದ ಸಂಸ್ಕಾರಗಳಾಗಿ ಆರೋಪಿತವಾಗುತ್ತವೆ. ಯಾವ ಆಹಾರವು ಯಾರ ಬಳಕೆಯಲ್ಲಿದೆ ಎನ್ನುವುದರ ಮೇಲಿಂದ, ಬಳಸುವವರು ಸಾಮಾಜಿಕವಾಗಿ ಹೊಂದಿರುವ ಸ್ಥಾನ–ಮಾನಗಳ ಮೇಲಿಂದ ಅನ್ನದ ಗುಣವನ್ನು ಅಳೆಯುವ ಮತ್ತು ಸಂಸ್ಕಾರಮೌಲ್ಯ ಕಟ್ಟುವ ಕೆಲಸ ನಡೆಯುತ್ತದೆ. ಇಂತಹ ಪ್ರಕ್ರಿಯೆಯೊಂದರಲ್ಲಿ ಅನ್ನಕ್ಕೆ ಸಾತ್ವಿಕ, ತಾಮಸ, ನಿಷ್ಠೆ, ವಿದ್ರೋಹವೇ ಮೊದಲಾದ ವರ್ಗೀಕರಣಗಳು ದೊರೆತು, ಸ್ವೀಕೃತ–ನಿರಾಕೃತವೆಂಬ ಆಹಾರದ ನೆಲೆಯ ಜಾತಿರಾಜಕಾರಣವು ಚಾಲನೆ ಪಡೆಯುತ್ತದೆ. ಇಂತಹ ಕಡೆ ಜಾತಿ ಕುರಿತ ಸಾಮಾಜಿಕ ಚರ್ಚೆಯು ಕೇವಲ ಮನುಷ್ಯರನ್ನಷ್ಟೇ ಕೇಂದ್ರೀಕರಿಸಿದರೆ ಸಾಲದಾಗುತ್ತದೆ. ಕನಕನ ಜಾತಿಚರ್ಚೆಗೆ ಈ ಅರಿವಿದೆ. ಅದು ಮನುಷ್ಯ ಸಮಾಜದಾಚೆಗೂ ತೆರೆದುಕೊಳ್ಳುತ್ತದೆ. ಕನಕ ಅನ್ನದ ನೆಲೆಯ ಕುಲಾಕುಲದ ರಾಜಕಾರಣವನ್ನೂ ಮಾತನಾಡಿಸಿದವನು. ಸಾಮಾನ್ಯರು, ಬಹುಸಂಖ್ಯಾತರು ಬಳಸುವ ಆಹಾರದ ಮಾದರಿಯೊಂದನ್ನು ಅಪವರ್ಗೀಕರಣಕ್ಕೊಳಪಡಿಸಿ, ಅದನ್ನು ವಿದ್ರೋಹ, ತಾಮಸಮಾದರಿ ಎನ್ನುವಂತೆ ನಾಮಾಂಕಿತಗೊಳಿಸಿಟ್ಟ ಬಗೆಯನ್ನು ಕುರಿತು ಸಂವಾದವೊಂದನ್ನು ಕಟ್ಟಿದವನು. ಆಹಾರಕ್ಕೆ ತಾಮಸಿಗ ಕಳೆಯನ್ನು ಆರೋಪಿಸಿ ಬಹುಸಂಖ್ಯಾತರನ್ನು ಸಾಂಸ್ಕೃತಿಕವಾಗಿ ಹೊರಗುಳಿಸುವ ರಾಜಕಾರಣವನ್ನು ಅನಾವರಣ ಮಾಡಿದವನು. ಆಹಾರಾಚರಣೆಯ ಅಪಮೌಲ್ಯೀಕರಣದ ಮೂಲಕ ಸಮುದಾಯಗಳ ರಾಕ್ಷಸೀಕರಣದ ಸಾಮಾಜಿಕ ವಾಸ್ತವದೆಡೆಗೆ ಗಮನ ಸೆಳೆದವನು. ಧಾನ್ಯಗಳನ್ನೇ ಹೋರಾಟಕ್ಕೆ ನಿಲ್ಲಿಸಿ ತಳಮೂಲದ ಅನ್ನವನ್ನು ಸತ್ವದಲ್ಲಿ ಗೆಲಿಸಿದವನು. ಸಂಘರ್ಷಕ್ಕಿಂತ ಸಹತ್ವವನ್ನು ಪ್ರತಿಪಾದಿಸುವಂತೆ ಕೊನೆಗೆ ರಾಮನ ಮೂಲಕ ರಾಗಿ–ಬತ್ತಗಳೆರಡೂ ಕೂಡಿ ಹಿತದಲಿ ಬದುಕಬೇಕೆಂಬ ಸಂದೇಶ ಸಾರಿದವನು. ಆಹಾರದ ನೆಲೆಯ ಕುರುಹಿನ ರಾಜಕಾರಣವನ್ನು ಧಾನ್ಯಗಳ ಕಥನ ರಾಜಕಾರಣದ ಮುಖಾಮುಖಿಯಾದವನು.

ಆದರೆ ಆ ತಳಮೂಲದ ಅನ್ನವನ್ನು ರಾಮಪ್ರೀತಿಯ ಧಾನ್ಯವಾಗಿ ವೈಭವೀಕರಿಸಿ, ಅದರ ಹೆಸರನ್ನು ರೂಪಾಂತರಿಸುವ ಕನಕ ರಾಗಿಯ ಎದುರು ಸೋತ ವ್ರೀಹಿಯ ಭಾಷಿಕ ಗುರುತನ್ನು ಬದಲಿಸುವುದಿಲ್ಲ. ರಾಗಿಯ ಗುರುತಷ್ಟೇ ಬದಲಿಸುತ್ತಾನೆ. ಸಾಮಾನ್ಯವಾಗಿ ಬದಲಾಗುವುದು ಸೋತವರ ಗುರುತು, ಭಾಷೆ. ಆದರೆ ಇಲ್ಲಿ ಗೆದ್ದವರ ಗುರುತು ಬದಲಾಗುತ್ತದೆ!? ಇದು ಕನ್ನಡಕ್ಕೆ, ಗ್ರಾಮ್ಯಕ್ಕೆ, ಫೋಕ್‌ಗೆ ಶ್ರೇಷ್ಠತೆಯ ಸಂಕೇತವಾಗುವ ಶಕ್ತಿಯಿಲ್ಲವೆಂಬ ಕೀಳರಿಮೆಯಂತೆಯೇ ಇದೆ. ಶೈವ ಹಾಗೂ ತಳಮೂಲಸಂಸ್ಕೃತಿ, ಸಂಸ್ಕಾರಗಳು ಮುಕ್ತಿಯೋಗ್ಯವಲ್ಲವೆಂಬ ಅಪನಂಬಿಕೆಯಂತಯಿದೆ. ವೈಷ್ಣವತೆಯೇ ತನ್ನ ನೂರೊಂದು ಕುಲವೆಲ್ಲವನ್ನೂ ಮುಕ್ತವಾಗಿಸಬಲ್ಲ ದಾರಿಯೆನ್ನುವ ಕನಕನ ನೆಲೆಯೇ ಇಲ್ಲಿಯೂ ಪುನರಾವರ್ತವಾಗಿದೆ. ಯಾಕೆಂದರೆ ನೆರದಲಗನ ನಾಮಾಂತರವೂ ವೈಷ್ಣವೀಕರಣವೇ ಆಗಿದೆ. ಇಲ್ಲಿ ಮುದ್ದೆಗುಳಿಗೆಯು ರಾಮನೆಂಬ ಹರಿಸರ್ವೋತ್ತಮನಿಂದಲೇ ಪ್ರಮಾಣಪತ್ರ ಪಡೆಯುತ್ತಿದೆ. ಸತ್ವದ ನೆಲೆಯಲ್ಲಿ ಲೋಕಪ್ರಿಯವಾದುದು ತತ್ವದ ನೆಲೆಯಲ್ಲೂ ರಾಮಪ್ರಿಯವಾಗುತ್ತಿದೆ!

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved** UGC CARE Listed(Group -I) Journal Volume 11, Iss 11, November 2022

**ಕುಲದ ಕುರಿತಾದ ಕನಕನ ನಿಲುವಿನ ಸಾಂಸ್ಕೃತಿಕ ಸಮಸ್ಯೆ**

ಜಾತಿಗೆ ಸಂಬಂಧಿಸಿದಂತೆ ಕನಕನ ರಾಮಧಾನ್ಯಚರಿತ, ಹರಿಭಕ್ತಿಸಾರ ಕಾವ್ಯಗಳೆರಡೂ ಮುಖ್ಯವಾದವುಗಳು. ಅವುಗಳ ಜೊತೆಗೆ 'ನಾವು ಕುರುಬರ ನಮ್ಮ ದೇವರು ಬೀರಯ್ಯ', 'ಕುಲ ಕುಲವೆಂದು ಹೊಡೆದಾಡದಿರಿ', 'ಕುಲ ಕುಲ ಕುಲವೆನ್ನುತಿಹರು ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ?' ಇತ್ಯಾದಿ ಕೀರ್ತನೆಗಳನ್ನೂ ಗಮನಿಸಿಕೊಂಡು, ಕನಕನಲ್ಲಿ ಸಾಮಾಜಿಕ ಸಮಾನತೆಯ ಜಿಜ್ಞಾಸೆಯಿದೆ ಎನ್ನುವಂತೆಯೇ ವಿವರಿಸಿಕೊಂಡು ಬರಲಾಗಿದೆ. ಆದರೆ ಕನಕನ ಬಂಡಾಯದ ತಳಹದಿ ಗಟ್ಟಿಯಾಗಿದೆಯೇ? ಇದೇ ಧ್ವನಿಯನ್ನು ಒಂದು ಹರಿಗಡಿಯದ ಸೆಲೆಯಾಗಿ ಕನಕ ಮುನ್ನಡೆಸಿದ್ದಾನೆಯೇ? ಇದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಯಾಕೆಂದರೆ ಕುಲವನ್ನು ಕುರಿತಂತೆ ಕನಕನ ಪ್ರಶ್ನೆ ಹಾಗೂ ಆತ ಪ್ರವೇಶಿಸಿದ ಆವರಣಗಳು ಒಂದಕ್ಕೊಂದು ವಿರೋಧವಾಗಿಯೇ ನಿಲ್ಲುತ್ತವೆ. ಸಹಜವಾಗಿಯೇ ಈ ಪ್ರಶ್ನೆಯನ್ನು ಒತ್ತಾಯಿಸುತ್ತವೆ. ಆತ್ಮದ ಕುಲ, ಜೀವದ ಕುಲ ಯಾವುದು ಎನ್ನುವ ಕನಕನ ಪ್ರಶ್ನೆಯಲ್ಲಿಯೇ ಆತ್ಮ–ಜೀವ–ಇಂದ್ರಿಯಗಳನ್ನು ತುಂಡಾಗಿಸಿಕೊಂಡ ಭೇದವಿದೆ. ಹಸುವಿನ ಮಾಂಸದಲ್ಲಿ ಉತ್ಪತ್ತಿಯಾದ ಕ್ಷೀರವನ್ನು ವಸುಧೆಯ ಭೂಸುರರೂ, ಕೆಸರಲ್ಲಿ ಹುಟ್ಟಿದ ತಾವರೆಯನ್ನು ಬಿಸಜನಾಭನೂ ಸ್ವೀಕರಿಸಿಲ್ಲವೇ ಎನ್ನುವಲ್ಲಿ, ಅನ್ನ ಹಾಗೂ ಆಚರಣಾ ಪರಿಕರಗಳ ಹುಟ್ಟಿನ ಕೀಳ್ತನ ಮತ್ತು ಅನುಭೋಗಿಗಳ ಶ್ರೇಷ್ಠತೆಗಳ ತರತಮವಿದೆ. ಬತ್ತ ಮತ್ತು ರಾಗಿಗಳನ್ನು ಮುಖಾಮುಖಿ ಮಾಡಿ ಕಾಲದ ಪರೀಕ್ಷೆಯಲ್ಲಿ ಗೆದ್ದುಬರುವಂತೆ ಚಿತ್ರಿಸಲ್ಪಡುವ 'ರಾಮಧಾನ್ಯ ಚರಿತ'ದ ನರೆದೆಲಗ ರಾಘವನ ಪ್ರೀತಿಗೆ ಪಾತ್ರವಾಗಿ ರಾಮಧಾನ್ಯವೆಂಬ ಸಂಸ್ಕೃತೀಕರಣಕ್ಕೂ, ವೈಷ್ಣವೀಕರಣಕ್ಕೂ ಒಳಗಾಗುವ ಮೂಲಕ ತನ್ನ ದೈನಿಕದ ಭಾಷೆ ಹಾಗೂ ಆರಾಧನಾತ್ಮಕ ಆವರಣದಿಂದ ಪಲ್ಲಟಗೊಳ್ಳುತ್ತದೆ. ಸಾಮಾಜಿಕ ಅಸ್ತಿತ್ವದ ಜೊತೆಗೆ ಭಾಷೆಯನ್ನೂ ತಳುಕು ಹಾಕುವ ಕನಕ ತಳಮೂಲದ ಉನ್ನತೀಕರಣವನ್ನು ಭಾಷಾಂತರ ಹಾಗೂ ಮತಾಂತರದ ಮೂಲಕ ಸಾಧಿಸುವ ಸಲುವಾಗಿ ಸಂಸ್ಕೃತೀಕರಣ ಹಾಗೂ ವೈಷ್ಣವೀಕರಣದ ಪರ್ಯಾಯ ಆಯ್ಕೆಗೆ ಮುಂದಾಗುತ್ತಾನೆ. ನರೆದೆಲಗನನ್ನು ನರೆದೆಲಗನಾಗಿಯೇ ಒಪ್ಪಿಕೊಳ್ಳುವ ಬದಲಿಗೆ ರಾಮಧಾನ್ಯವಾಗಿಸುತ್ತಾನೆ. ಈ ನಡೆಯಲ್ಲಿ ಕೀಳ್ತನದಿಂದ ಬಿಡುಗಡೆಗೊಳಿಸುವಿಕೆಯಿದೆ. ಆದರೆ ಈ ಬಿಡುಗಡೆ, ಮಡಿಯಾಗುವಿಕೆ ನರೆದೆಲಗನಿಗಷ್ಟೇ. ವ್ರೀಹಿಗೆ ಯಾವ ರೂಪಾಂತರವೂ ಇಲ್ಲ. ಹೀಗಾಗಿ ಕನಕ ಆಯ್ದುಕೊಳ್ಳುವ ಕುಲದ ನೆಲೆಯ ಅವನತಾವಸ್ಥೆಯ ಪರಿಹಾರಗಳು ಸಾಮಾಜಿಕ ಮುಂಚಲನೆಯ ಪರಿಹಾರಗಳು ಎಂದೆನಿಸುವುದಿಲ್ಲ. ಶೂದ್ರಾನ್ನ ಅಂದವನೇ ಅದರ ನಾಮಾಂತರ ಮತ್ತು ಮತಾಂತರದ ಮೂಲಕ ಅದನ್ನು 'ಮಡಿ ಅನ್ನ' ಮಾಡಿಬಿಡುತ್ತಾನೆ. ನರೆದೆಲಗ ನರೆದೆಲಗನಾಗದೆ ಸಾಂಸ್ಕೃತಿಕ ಪರಾಧೀನತೆಗೊಳಗಾಗುತ್ತದೆ.

ಇಷ್ಟೇ ಅಲ್ಲ, ಕನಕನಲ್ಲಿ ಯಥಾಸ್ಥಿತಿ ಪರವಾದ ವಿಪುಲ ನಿರೂಪಣೆಗಳಿವೆ. ಹುಟ್ಟು ಮುಖ್ಯವೆಂದು ಸಾಮಾಜಿಕ ಸ್ಥಾನಮಾನವನ್ನು ಹೊಟ್ಟೆಯಲ್ಲಿರುವ ಭ್ರೂಣಕ್ಕೆ ಗಂಟುಹಾಕುವ ಕುಲನಿರೂಪಣೆಯನ್ನೇ ಪ್ರಶ್ನಿಸುತ್ತದೆ ಎನ್ನಲಾದ 'ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ' ಎನ್ನುವ ಕೀರ್ತನೆಯೂ ಕನಿಷ್ಠ ಹುಟ್ಟಿನ ತಾವರೆ, ಹಾಲು, ಕಸ್ತೂರಿಗಳನ್ನು ಉದಾಹರಿಸುವುದು ಶ್ರೇಷ್ಠರು ಅವುಗಳನ್ನು ಸ್ವೀಕರಿಸಿದ್ದಿಲ್ಲವೇ ಎಂಬ ನೆಲೆಯಲ್ಲಿ. ಈ ಪ್ರಶಾರ್ಥಕ ಧಾಟಿಯಲ್ಲಿ ದಿಟ ಅರ್ಥದ ಯಥಾಸ್ಥಿತಿಯ ಮೀರುವಿಕೆ ಇದೆಯೆನ್ನಲಾಗದು. ಯಾಕೆಂದರೆ ಈ ವಸ್ತುಗಳ ದಿವ್ಯತ್ವವು ಸಾಮಾಜಿಕ ಸಂದರ್ಭದ ಶ್ರೇಷ್ಠರ ಬಳಕೆಯಿಂದ ದಕ್ಕಿದುದು. ಇದು ಪರೋಕ್ಷವಾಗಿ ಕನಿಷ್ಠರನ್ನು ಶ್ರೇಷ್ಠರು ಸ್ವೀಕರಿಸುವ ಮೂಲಕ ದಕ್ಕುವ ಮಾನ್ಯತೆಯನ್ನೇ ಸೂಚಿಸುವಂತಿದೆ. ಅನ್ನವೊಂದು ಅನ್ನವಾಗಿಯೇ ಶ್ರೇಷ್ಠವೆನಿಸದೆ ಬಳಸುವವರಿಂದ ಉನ್ನತಾವನತಗೊಳ್ಳುವ ರೂಢಿಯ ಸಾಮಾಜಿಕ ವಾಸ್ತವವನ್ನೇ ಈ ಕೀರ್ತನೆ ಅನುಮೋದಿಸಿದೆ. ಅಂತೆಯೇ ಯಥಾಸ್ಥಿತಿಪಲ್ಲಟದ ಬಗೆಗೆ ಆತಂಕಪಡುವ, ಲೋಕ ಕೆಟ್ಟಿತೆಂದು ವಿಷಾದಿಸುವ 'ಕಲಿಯುಗದ ಮಹಿಮೆಯನು ಕಂಡಷ್ಟು ಹೇಳುವೆನು' ಎನ್ನುವ ಕೀರ್ತನೆಯಲ್ಲಿ ಬರುವ ದನಿಗಳು ಕನಕನಲ್ಲಿರುವ ವ್ಯವಸ್ಥೆಯ ಪರವಾದ ನಿಲುವಿಗೆ ಮತ್ತಷ್ಟು ಪುಷ್ಟಿಯೊದಗಿಸುತ್ತದೆ.

> **"ವಾಸವರಸೆಯು ತಪ್ಪಿ ವೈರಿ ವರ್ಗವು ಹೆಚ್ಚಿ**
> **ದೇವ ಬ್ರಾಹ್ಮಣ ಗುರು ಹಿರಿಯರನು ಜರಿದು**
> **ಕೇವಲಾಧಮರೆಲ್ಲ ಸಿರಿ ಮದದಿ ಸೊಕ್ಕಿದರು**
> **ಕಾವರಾರೈ ಸಾಧು ಸಜ್ಜನರನೀಗ ॥**
> **ವೇದ ವಿಪ್ರರು ತಮ್ಮ ವೃತ್ತಿ ಸ್ವಾಸ್ಥ್ಯವ ಕಳೆದು**
> **ಆಧಾರವಿಲ್ಲದೆ ತಿರಿದು ತಿಂಬುವರು……."**

ಸಾಮಾಜಿಕ ಯಥಾಸ್ಥಿತಿಯಲ್ಲಿ ಪಲ್ಲಟವಾದುದನ್ನೇ ಉಲ್ಲೇಖಿಸಿ 'ಸತ್ಯಧರ್ಮಗಳೆಲ್ಲ ಎತ್ತ ಪೋದುವೋ ಕಾಣೆ ಉತ್ತಮರ ಜೀವನಕೆ ದಾರಿಯಿಲ್ಲ' ಎಂದು ವಿಷಾದಿಸುವ ಈ ಕೀರ್ತನೆಯಲ್ಲಿ ವ್ಯವಸ್ಥೆಯ ಮರುಸ್ಥಾಪನೆಯ ಆಶಯವಿದೆ. 'ಸಂಭವಾಮಿ

ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed(Group -I) Journal Volume 11, Iss 11, November 2022

ಯುಗೇ ಯುಗೇ' ಎಂದ ಗೀತೆಯ ಘೋಷವಾಕ್ಯದ ಅವತಾರ ಕಲ್ಪನೆಯನ್ನು ಸಮರ್ಥಿಸುವಂತೆ 'ತಡವಮಾಡಲಿ ಬೇಡ ತಾಳಲಾರದು ಲೋಕ' ಎಂದೇ ಕೀರ್ತನೆಯ ಆದಿಕೇಶವನನ್ನು ಆಗ್ರಹಿಸಿ ನಿಲುಗಡೆ ಕಾಣುತ್ತದೆ.

ಇಲ್ಲಿರುವುದು ಕುಲ ಅಥವಾ ಜಾತಿಯನ್ನು ತಾತ್ವಿಕವಾಗಿ ನಿರಾಕರಿಸದ ಯಥಾಸ್ಥಿತಿ ನಡೆ. ಈ ಹರಿಸರ್ವೋತ್ತಮ ವಾಯುಜೀವೋತ್ತಮ ತತ್ವದೊಂದಿಗೆ, ಜೀವ–ಪರಮಾತ್ಮ ಭೇದವೂ ಸೇರಿದ ಪಂಚಭೇದವನ್ನು ಪ್ರತಿಪಾದಿಸುವ ದ್ವೈತತತ್ವದ ಸಮರ್ಥನೆಯ ರೂಢಿವಾದವು ಆತನ ಕೀರ್ತನೆ, ಕಾವ್ಯಕೃತಿಗಳಲ್ಲೂ ಸಾಕಷ್ಟಿದೆ. ಹೀಗೆ ನಿತ್ಯನಾರಕಿ, ನಿತ್ಯಮುಕ್ತರೆನ್ನುವ ಭೇದಗಳನ್ನು ಒಪ್ಪಿದ ಮನಸ್ಸಿಗೆ ಜೀವಜಗತ್ತೇ ಒಂದೆನ್ನುವ ಅದ್ವೈತವಾಗಲೀ, ದ್ವೈತಾದ್ವೈತಗಳನ್ನು ದಾಟಿದ ಅದ್ವಯವಾಗಲಿ ಸಾಧ್ಯವಿಲ್ಲ. ಆದರೆ ಈ ಸಮರ್ಥನೆಗೆ ಕನಕನ ಸಾಮಾಜಿಕ ಹಿನ್ನೆಲೆ ಕಾರಣವಲ್ಲ. ಅದರ ಕಾರಣಗಳು ಮಧ್ಯಯುಗೀನ ಭಕ್ತಿಪಂಥಗಳಲ್ಲಿದೆ. ಮಧ್ಯಯುಗೀನ ಭಕ್ತಿಪಂಥಗಳ ಕುರಿತಾದ ಅತಿರಂಜಿತ ಸತ್ಯಗಳನ್ನು ಪ್ರಸ್ತಾಪಿಸುತ್ತಾ, "ಸಾಮಾನ್ಯವಾಗಿ ಭಕ್ತಿಪಂಥವನ್ನು ಒಂದು ಪ್ರತಿಭಟನಾತ್ಮಕ ಚಳುವಳಿ ಎಂಬರ್ಥದಲ್ಲಿ ವ್ಯಾಖ್ಯಾನಿಸುವುದುಂಟು. ರಾಜತ್ವದ ವಿರುದ್ಧ ಪ್ರತಿಭಟನೆ ಎಂದೂ ವ್ಯಾಖ್ಯಾನಿಸುವುದುಂಟು. ಆದರೆ, ಇವೆರಡೂ ಅರ್ಧಸತ್ಯಗಳು. 'ಹಿಂದೂ' ಧರ್ಮದ ಚೌಕಟ್ಟಿನೊಳಗೆ ನಿಂತು ಈ 'ಮಧ್ಯಯುಗ'ದ ಭಾರತೀಯ ಚರಿತ್ರೆಯ ಸಂದರ್ಭದಲ್ಲಿ ಈ ಭಕ್ತಿಪಂಥ ಪ್ರಭುತ್ವ ಮತ್ತು ಸಾಂಪ್ರದಾಯಿಕತೆಯನ್ನು ಸ್ಥಿರೀಕರಿಸುವ ಕೆಲಸ ಕೂಡ ಮಾಡಿದೆ ಎನ್ನುವುದೂ ನಿಜ. ಅದರಲ್ಲೂ ಆದಿವಾಸಿ ಮತ್ತು ಕೆಳಜಾತಿಗಳನ್ನು ಹಿಂದೂಧರ್ಮದ ಕೇಂದ್ರೀಕೃತ ವ್ಯವಸ್ಥೆಯೊಳಗೆ ಅದು ತಂದುಬಿಟ್ಟಿತು............ ಭಕ್ತಿಪಂಥ ಮಾಡಿದ ಮುಖ್ಯ ಕೆಲಸವೆಂದರೆ ಆದಿವಾಸಿ ಕೆಳಜಾತಿಗಳ ಮೂಲಧರ್ಮದ ನಿರಾಕರಣೆ. .....ಹೀಗೆ ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳು ಪರಮ ತಾತ್ವಿಕ ಆದರ್ಶಗಳಾಗಿ ಬೆಳೆದುನಿಂತವು" (ಡಿ.ಆರ್.ನಾಗರಾಜ, ೨೦೦೬, ಸಾಹಿತ್ಯ ಕಥನ, ಪು.೧೧೩) ಎನ್ನುವ ಡಿ.ಆರ್.ನಾಗರಾಜ ಅವರ ಮಾತುಗಳಲ್ಲಿ ಈ ಕಾರಣಗಳು ಸ್ಪಷ್ಟವಾಗಿವೆ. ತಳಮೂಲದನಾಗಿಯೂ ಕನಕ ಕರ್ಮಸಿದ್ಧಾಂತ, ಆತ್ಮವಾದಗಳನ್ನು ಮಾನ್ಯಮಾಡಿ ವೈದಿಕತೆಯ ಪುನಶ್ಚೇತನದ ಪರವಾಗಿ ಯಾಕೆ ನಿಲ್ಲುತ್ತಾನೆ ಎನ್ನುವುದಕ್ಕೆ ಕಾರಣಗಳು ಖಚಿತವಾಗಿವೆ.

ಕನಕ ಪ್ರವೇಶಿಸಿದುದು ಮೂಲತಃ ವೇದ, ಸ್ಮೃತಿ, ಕರ್ಮಸಿದ್ಧಾಂತವೇ ಮೊದಲಾದ ರೂಢಿವಾದದ ಪ್ರಮಾಣಗಳನ್ನು ಒಪ್ಪಿಕೊಂಡ ಆವರಣವನ್ನು. ಜಾತಿ ಅಥವಾ ಹುಟ್ಟನ್ನಾಧರಿಸಿದ ಶ್ರೇಷ್ಠತೆ– ಕನಿಷ್ಠತೆಗಳನ್ನು ಸಮರ್ಥಿಸುವ ಪ್ರಮಾಣಗಳನ್ನೇ ಒಪ್ಪಿದ ಆವರಣವದು. ಇನ್ನೂ ಒಂದು ಸಂಗತಿಯೆಂದರೆ ಅದು "'ಮುಟ್ಟೀಯ ಮುಟ್ಟೀಯ' ಎಂದು ಕೂಗಿಕೊಳ್ಳುತ್ತ ಬರುವವರು ಇದಿರಿಗೆ ಬರುವ ಮುಟ್ಟಬಾರದವನೆಂದೆನಿಸಿಕೊಂಡ ಚಾಂಡಾಲನ ಪಾದವನ್ನು ಮುಟ್ಟಿ ಕಾಯಾರ್ಥಸತ್ಯವನ್ನು ಸಿದ್ಧಿಸಿಕೊಂಡು ಮರುಕ್ಷಣದಲ್ಲಿಯೇ ಮತ್ತದೇ 'ಮುಟ್ಟೀಯ ಮುಟ್ಟೀಯ' ಎಂದು ವಾಸ್ತವ ಸತ್ಯದ ಜೊತೆಗೆ ಸಾಗ"ಬಲ್ಲ, (ನಟರಾಜ ಬೂದಾಳು, ಪ್ರಜಾವಾಣಿ ಸಾಪ್ತಾಹಿಕ ದಿ:೨೦/೭/೧೪, ಪು.೪) ಜಾಣ್ಮೆಯ ಆವರಣವೂ ಹೌದು. ಹಾಗೆ ಅಗತ್ಯಬಿದ್ದಾಗಷ್ಟೇ ಬಾಗಿ, ಮತ್ತದೇ ಹಳೆದಾರಿಯನ್ನು ಹಾಗೆಯೇ ಕಾಪಾಡಿಕೊಂಡು ಬಂದ ಈ ಕೂಟದಲ್ಲಿ ಕನಕನಿಗೆ ಸಿಗುತ್ತಿತ್ತೆನ್ನಲಾದ ಮೊದಲ ತೀರ್ಥವಾಗಲೀ, ಅವಕಾಶಗಳಾಗಲೀ ಈ ವಾಸ್ತವ ಸತ್ಯಕ್ಕೆ ಹೊರತಾದವುಗಳಲ್ಲ. ಹಾಗಾಗಿ ಇಲ್ಲಿ ದೇಗುಲ, ತೀರ್ಥಕ್ಷೇತ್ರ, ದಾನ, ಮೋಕ್ಷ ಎಂಬ ಯಾವ ಜಡರಚನೆಯ ಕುರಿತೂ ರಚನಾತ್ಮಕವಾದ ವಿರೋಧವಿಲ್ಲ. ಭಾಗಶಃ ಇನ್ನೊಂದರ್ಥದಲ್ಲಿ ಸಮಾನತೆಯ ತತ್ವಗಳನ್ನು ಎದುರಾಳಿಯಂತೆ ಕಂಡ ಸನಾತನವಾದವೇ, ಮಾರುವೇಷದಲ್ಲಿ ತನ್ನ ದಾಳಿಯನ್ನು ಜೀವಂತವಿಡಲು ಕಂಡುಕೊಂಡ ದಾರಿಯ ಭಾಗವೂ ಅದಾಗಿತ್ತು. ಇಂತಹ ಮಾರುವೇಷದ ಕೂಟದ ಒಳಗಿವನಾಗಿದ್ದುದರಲ್ಲೇ ಕನಕನ ವೈಚಾರಿಕ ದ್ವಂದ್ವಗಳ ಕಾರಣಗಳಿವೆ. ಈ ಮಿತಿಗಳ ನಡುವೆಯೂ ಕನಕ ಒಬ್ಬ ಕವಿಯಾಗಿ ರಾಮಾಯಣ, ಭಾರತ ಕಥನಗಳನ್ನು ಭಿತ್ತಿಯಾಗಿ ಬಳಸಿಕೊಂಡು ಲೋಕದ ಸಂಕಟಗಳ ಕಥೆ ಹೇಳಲು ಯತ್ನಿಸಿದವನು. ಒಬ್ಬ ಕೀರ್ತನಕಾರನಾಗಿ ತಂಬೂರಿಯ ನಾದದೊಂದಿಗೆ ಪರಮವೈಷ್ಣವನಂತೆ ದಾಸನ ಕಂಕೈರ್ಯವನ್ನು ನಿರ್ವಹಿಸುತ್ತಲೇ, ಶಿಷ್ಟನೆಲೆಗೆ ಆಗಂತುಕನೆನಿಸಿದ ತನ್ನ ನಿಜಸ್ತರದ ಬೇರೆ ಮಾತುಗಳನ್ನು ಹೇಳಲೆತ್ನಿಸಿದವನು. ಆದರೆ ಆತನೊಳಗಿನ ತಳಮೂಲದ ಮನಸ್ಸಿನ ಬಿಡುಗಡೆಯ ಬಯಕೆಯ ಮೇಲೆ ಆತ ಒಪ್ಪಿಕೊಂಡ ಆವರಣಗಳು ತಮ್ಮ ಪರಿಣಾಮವನ್ನು ತೋರಿದವೆಂಬುದನ್ನೂ ಅಲ್ಲಗಳೆಯಲಾಗದು. ಹಾಗಾಗಿಯೇ ನಮಗೆ ಅನೇಕ ವೇಳೆ ಕನಕ ಪರಸ್ಪರ ವಿರುದ್ಧವಾದ ಮಾತುಗಳನ್ನು ತನಗೆ ತಾನೇ ಹೇಳಿಕೊಳ್ಳುತ್ತಿರುವಂತೆಯೂ ಭಾಸವಾಗುತ್ತದೆ. ಆತ ರಾಮಾಯಣ, ಭಾರತ ಕಥೆಯನ್ನು ಹೇಳುವವನಂತೆ ಹೊರಟು ಸಂಸಾರದ ಕಥೆ, ಆಹಾರದ ಕಥೆ ಹೇಳುವ ಮೂಲಕ ಬೃಹತ್ ಕಥಾನಕದ ಭಿತ್ತಿಯಲ್ಲಿ ಲೋಕ ಸಂಕಟದ ಪುಟ್ಟ ಕಥೆಯನ್ನು ಫೋಕಸ್ ಮಾಡೋದು; ಹರಿಕೀರ್ತನೆಯನ್ನು ಮಾಡುತ್ತಲೇ ಜಾತಿ, ಕುಲ, ಕರ್ಮಸಿದ್ಧಾಂತಗಳನ್ನು ಪ್ರಶ್ನಿಸಿ ಶ್ರೇಷ್ಠತೆಯ ವ್ಯಸನಿಗಳನ್ನು ಕೆಣಕುವುದನ್ನು ಒಟ್ಟೊಟ್ಟಿಗೇ ನಿರ್ವಹಿಸುತ್ತಿರುತ್ತಾನೆ. ಲೋಕವನ್ನು ತೆರೆದ ಕಣ್ಣಿನಿಂದ ನೋಡಿದ ಕನಕನಲ್ಲಿ ಭಕ್ತನೆನ್ನುವ ಅಂಬೋಣದ ನಡುವೆಯೂ ಲೋಕಸಂಕಟಕ್ಕೆ ಕನಲುವ, ಮರುಗುವ

 © 2012 IJFANS. All Rights Reserved 

ಗುಣವಿದೆ. ಬದುಕು ಹಸನಾಗಬೇಕು, ಸಾಮರಸ್ಯದ ಲೋಕ ಸಾಧ್ಯವಾಗಬೇಕು ಎಂಬ ಬಯಕೆ ಇದೆ. ಇಂತಹ ಘಳಿಗೆಗಳಲ್ಲಿ ಆತನಿಗೆ ಅನೇಕ ಬಾರಿ ಭಕ್ತಿ ಒಂದು ನೆವವಷ್ಟೇ ಆಗುವುದಿದೆ. ಆದರೂ ಆತ ಬಲೆಯೊಳಗೆ ಬಿದ್ದ ಮಿಕವಾಗಿ ಅನೇಕ ಬಾರಿ ಬಲೆಯನ್ನೇ ನೆಲೆಯೆಂದು ಭ್ರಮಿಸಿರುವುದನ್ನು ಅಲ್ಲಗಳೆಯಲಾಗದು.

**ಪರಾಮರ್ಶನ ಗ್ರಂಥಗಳು**

೧. ಎಸ್. ಎಸ್. ಹಿರೇಮಠ ೨೦೦೫, ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ
೨. ಕೆ. ಪಣಿರಾಜ್ ೨೦೦೩, ಅಂಟೋನಿಯೋ ಗ್ರಾಮ್ಷಿ, ಅಭಿನವ ಪ್ರಕಾಶನ ಬೆಂಗಳೂರು.
೩. ದೇವನೂರ ಮಹಾದೇವ ೨೦೧೩, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ ಬೆಂಗಳೂರು.
೪. ನಟರಾಜ ಬೂದಾಳು ೨೦೧೦, ನಾಗಾರ್ಜುನ–ಅಲ್ಲಮಪ್ರಭು: ಒಂದು ತೌಲನಿಕ ಅಧ್ಯಯನ, ಗೋಧೂಳಿ ಪ್ರಕಾಶನ ಬೆಂಗಳೂರು.
೫. ಡಿ.ಆರ್ ನಾಗರಾಜ ೨೦೦೬, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ ಸಾಗರ.
೬. ಪದ್ಮಾಲಯ ನಾಗರಾಜ್ ೨೦೧೨, ನಡೆಕಾರ ದೊಡ್ಡವೆಂಕಟಗಿರೆಪ್ಪ, ಆದಿಮ ಪ್ರಕಾಶನ ಕೋಲಾರ
೭. ಬಸವರಾಜ ಕಲ್ಗುಡಿ ೨೦೦೧, ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
೮. ಬೆಳಗೆರೆ ಕೃಷ್ಣಶಾಸ್ತ್ರಿ ೨೦೧೦, ಯೇಗ್ದಾಗೆಲ್ಲಾಐತೆ, ಅಭಿನವ ಪ್ರಖಾಶನ ಬೆಂಗಳೂರು.
೯. ಮ.ಸು. ಕೃಷ್ಣಮೂರ್ತಿ ೨೦೧೦, ಸಿದ್ಧ ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೦. ರಹಮತ್ ತರೀಕೆರೆ(ಸಂ)೨೦೦೧, ಕನ್ನಡ ಅಧ್ಯಯನ ಸಂಪುಟ–೭, ಸಂಚಿಕೆ–೨, ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೧. ರಹಮತ್ ತರೀಕೆರೆ(ಅನು)೨೦೧೧, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಅಭಿನವ ಪ್ರಕಾಶನ ಬೆಂಗಳೂರು.
೧೨. ಲಿಂಗದೇವರು ಹಳೆಮನೆ(ಸಂ)೨೦೦೯, ಅರುಹು ಕುರುಹು ಸಂಪುಟ–೧, ಸಂಚಿಕೆ–೧, ಮೈಸೂರು.
೧೩ ಸುಧಾಕರ(ಸಂ)೧೯೯೯,ಕನಕ ಸಾಹಿತ್ಯದರ್ಶನ ಸಂಪುಟ–೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.
೧೪ ಸಾ.ಶಿ.ಮರುಳಯ್ಯ(ಸಂ)೧೯೯೧, ಕನಕ ಸಾಹಿತ್ಯ ದರ್ಶನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.
೧೫. ಹೆಚ್.ಎಸ್.ಕೋತಿನ(ಸಂ)೧೯೮೪, ಮೋಹನ ತರಂಗಿಣಿ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

*****